ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ
ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 1 ಸಂಚಿಕೆ : 14 ಅಕ್ಟೋಬರ್ 15 ರಿಂದ 30, 1997 ಪುಟಗಳು : 24 ರೂ. 5.



"ಸುರು ಸುರು, ಸುರು ಸುರು ಪಟಾಕಿ ಹಚ್ಚೋಣಾ..."

ಹಳೆಯ ಮೆಲುಕು, ಹೊಸ ನಿರೀಕ್ಷೆಯಲ್ಲಿ ಕಂದಮ್ಮ

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟಡ ಎಲ್. ಶಿವಕುಮಾರ್

ಕಾರ್ಯ ನಿರ್ವಾಹಕಿ :
ಕು|| ಗೀತಾ ಮೋಂಟಡ್ಕ

ಪತ್ರಿಕಾ ಪ್ರತಿನಿಧಿ :
ಕು|| ಧನು ಚೆರಿಯಮನೆ

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮಣ್ಣಾಪುರ ಧರಣಿ ಗಣಪತಿ

ಮುದ್ರಕರು :
ಮಣ್ಣಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,

ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಹಿನಕಲ್ ಗ್ರಾಮ ಮತ್ತು
ಅಂಚೆ [ಅರಳಿಕಟ್ಟೆ ಹತ್ತಿರ]
ಮೈಸೂರು–570 017.
ದೂರವಾಣಿ : **0821–516771**

ಒಳನೋಟ

ಅರೆ ಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ :

ಗೌಡರಿಗೆ ಮೀಸಲಾಗಿರುವ ಸ್ಮಶಾನ (ಸುಡ್ಕುಳಿ)

ಮಾನವನ ಅಂತ್ಯದಲ್ಲಿ 6'X3' ನೆಲ ಅವಶ್ಯ ಎಂಬುವುದು ಸತ್ಯ, ಎಲ್ಲರಿಗೂ ತಿಳಿದಿರುವ ವಿಷಯ. ಇಂತಹ ವಿಷಯ ಮಾತಿಗೆ ಬಂದಾಗ ಜನ ಇದೆಲ್ಲಾ ಸಾಮಾನ್ಯವೆಂದು ತಮಾಷೆಯಾಗಿ ನಕ್ಕು ಸುಮ್ಮನಾಗುತ್ತಾರೆ. ಅಥವ ಆ ಮಾತಿನಿಂದ ದೂರ ಉಳಿಯ ಬಯಸುತ್ತಾರೆ. ಆದರೆ ಅವನ ಅಂತ್ಯ ಬಂದಾಗ ಸಂಬಂಧಿಕರು ಸ್ಮಶಾನ (ಸುಡ್ಕುಳಿ)ಕ್ಕೆ ಶರಣಾಗುತ್ತಾರೆ. ಹೀಗಾದಾಗ ಸ್ಮಶಾನದ ವ್ಯವಸ್ಥೆ ಹೇಗಿರಬೇಕು ? ಅಂತ್ಯ ಸಂಸ್ಕಾರಕ್ಕೆ ಅವಶ್ಯ ಸಿದ್ಧತಾ ಸಾಮಗ್ರಿಗಳು ಬೇಕಾಗಬಹುದು. ಅದು ತಕ್ಷಣ ಕೈಗೆ ಸಿಗುವಂತಿದ್ದರೆ ನೊಂದ ಮನಸ್ಸಿಗೆ ಸ್ವಲ್ಪ ಹಗುರವೆನಿಸಬಹುದು.

ಹೀಗೊಮ್ಮೆ, ಮಡಿಕೇರಿ ನಗರದ ನಮ್ಮ ಜನಾಂಗಕ್ಕೆ ಮೀಸಲಾದ ಸ್ಮಶಾನಕ್ಕೆ ಭೇಟಿ ಕೊಡಬೇಕಾಗಿ ಬಂತು. ಅಂದು ಕೂಡಕಂಡಿ ಪೊನ್ನಪ್ಪನವರ ಅಂತ್ಯ ಸಂಸ್ಕಾರವಿತ್ತು. ಈ ಸ್ಮಶಾನ ಸುಮಾರು 125'X125' ವಿಸ್ತೀರ್ಣ ಹೊಂದಿದೆ. ನಮ್ಮ ಜನಾಂಗವೇ ಬಹುಪಾಲಿರುವ ಮಡಿಕೇರಿ ನಗರಕ್ಕೆ ಈ ಸ್ಮಶಾನದ ವಿಸ್ತೀರ್ಣ ಬಹಳ ಕಡಿಮೆ ಎನಿಸಿತು. ಇದು ರಾಜಾಸೀಟ್‌ನಿಂದ 1/2 ಕಿ. ಮೀ. ವಿಲ್ಸನ್‌ಗಾರ್ಡ್ ರಸ್ತೆ ಬದಿಯಲ್ಲಿದೆ. ಆದರೂ ಅದನ್ನು ಹುಡುಕಬೇಕಾದರೆ ಅದರ ಆಡಳಿತ ವರ್ಗದವರನ್ನು ಕೇಳಬೇಕಾಗುತ್ತದೆ. ಏಕೆಂದರೆ ಇಲ್ಲಿ ನಾಮಫಲಕವಿಲ್ಲ. ಅದಕ್ಕೆ ಸಂಬಂಧ ಪಟ್ಟಂತೆ ಒಂದು ಕೊಠಡಿಯಾಗಲಿ, ನೆರಳಿಗೆ ಮರ ಗಿಡಗಳಾಗಲಿ, ದಣಿದು ಬಂದ ಜನಕ್ಕೆ ಸ್ವಲ್ಪ ವಿಶ್ರಮಿಸಿಕೊಳ್ಳಲು ಕಲ್ಲು ಬೆಂಚಾಗಲಿ, ನಿಂತುಕೊಂಡು ವಿಶ್ರಮಿಸಲು ಸಮತಟ್ಟಾದ ನೆಲವಾಗಲಿ ಇಲ್ಲ. ಹಾಗೆಯೇ ಈ ನೆಲದ ಸುತ್ತಾ ಸುತ್ತು ಗೋಡೆ ನಿರ್ಮಿಸಲಾಗಿದೆಯಾದರೂ ಸುಣ್ಣವಿಲ್ಲದೆ ಗಿಡ ಗಂಟೆಗಳು ಬೆಳೆದು ನಿಂತಿವೆ. ಗೇಟು ಮುರಿದು ಬಿದ್ದಿದೆ. ಪಶು ಪ್ರಾಣಿಗಳಿಗೆ ನಿರಂತರ ಪ್ರವೇಶಕ್ಕೆ ಅವಕಾಶವಿದೆ.

ಆಗಿನ ಪುರಸಭಾಧ್ಯಕ್ಷರಾದ ಎಂ. ಸಿ. ವಾಸುದೇವರವರು ಗಿಡಗಳನ್ನು ಹಾಕಿಸಲು ಸಸಿಗಳನ್ನು ಸಂಬಂಧಪಟ್ಟ ಧುರೀಣರಿಗೆ ಕೊಟ್ಟಿದ್ದರಂತೆ. ಅದು ಇಂದು ನಮ್ಮ ಗಮನಕ್ಕೆ ಬರುತ್ತಿಲ್ಲಾ. 1958ರ ನಿ ಡ್ಯ ಮ ಲೆ ಸೋಮಣ್ಣನವರ ಗೋರಿ ತನ್ನೊಳಗೆ ಗೋಳಿ ಮರವನ್ನು ಅರಗಿಸಿಕೊಂಡು ತುಂಬ ಹಳೆಯ ಕಥೆಯನ್ನು ಹೇಳುವಂತೆ ನಿಂತಿದೆ. ಅದರ ದುರಸ್ತಿ ಸಹ ಇಲ್ಲ. ಮಳೆಗಾಳಿಯ ಹೊಡೆತಕ್ಕೆ ನೆಲ ಪರಟಾಗಿದೆ. ಈ ನೆಲವನ್ನು ಸಮಗೊಳಿಸುವುದು ಸೂಕ್ತ. ಸ್ಮಶಾನದ ಸುರಕ್ಷತೆಗಾಗಿ ನಿರ್ಮಿಸಿರುವ ಗೋಡೆಗಳನ್ನು ಎತ್ತರಿಸಬೇಕಿದೆ ಅಥವಾ ಕನಿಷ್ಠ ಕಬ್ಬಿಣದ ಮುಳ್ಳು ತಂತಿಯನ್ನು ಏರಿಸಬೇಕಿದೆ. ಏಕೆಂದರೆ, ಅಕ್ಕ ಪಕ್ಕದ ಮನೆಯವರು ಈ ಜಾಗವನ್ನು ಕಾರ್ಪೊರೇಷನ್ ತೊಟ್ಟಿ ಎಂದು ಭಾವಿಸಿ ಕಸ ಸುರಿಯುತ್ತಿದ್ದಾರೆ. ಅದರ ರಾಶಿಗಳು ಹೆಚ್ಚಾದಾಗ ಅಲ್ಲಿ ಶುಚಿತ್ವ ಕಳೆದುಕೊಳ್ಳಬೇಕಾಗುತ್ತದೆ. ಈ ಅಲ್ಪ ಜಾಗದಲ್ಲಿ ಸ್ಮಶಾನ (ಸುಡ್ಕುಳಿ) ಒಂದು ಒಳ್ಳೆಯ ರೂಪ ಪಡೆದರೆ ಅದು ಸೂಕ್ತವೆನಿಸುತ್ತದೆ.

ಈ ನಿಟ್ಟಿನಲ್ಲಿ ದಾನಿಗಳು ಸಹಕರಿಸಿದರೆ ಗೌಡ ಜನಾಂಗಕ್ಕೆ ಹೆಮ್ಮೆಯ ಸಂಗತಿಯಾದೀತು.

ನಾಯಿ ಕಡಿತದ ಪರಿಣಾಮ 20 ವರ್ಷ

ನಾಯಿ ಕಚ್ಚಿದರೆ ಅದರ ಪರಿಣಾಮ ಸುಮಾರು 20 ವರ್ಷಗಳವರೆಗೂ ಉಳಿಯುವ ಸಾಧ್ಯತೆ ಇದೆ. ಅಂದರೆ ಇದರಿಂದಾಗುವ ಹೈಡ್ರೋಫೋಬಿಯಾ ಎಂಬ ರೋಗ 20 ವರ್ಷಗಳ ನಂತರವೂ ಕಾಡಬಹುದು. ಅವಕ್ಕೆ ಯಾವ ಚಿಕಿತ್ಸೆಯೂ ಇಲ್ಲ. ಹುಚ್ಚು ನಾಯಿ ಕಚ್ಚಿಸಿಕೊಂಡ ವ್ಯಕ್ತಿ 48 ಗಂಟೆಗಳಲ್ಲಿ ಸಾಯುತ್ತಾನೆ.

ಈ ರೋಗ ಪೀಡಿತ ವ್ಯಕ್ತಿ ನೀರನ್ನು ನೋಡುವಾಗಲೇ ಕಂಪಿಸುತ್ತಾನೆ. ಅವನ ಬಾಯಿಂದ ನೊರೆ ಬರುತ್ತದೆ. ಉಸಿರಾಡಲು ಬಹಳ ತೊಂದರೆ ಪಡುತ್ತಾನೆ. ಈತ ಇನ್ನೊಬ್ಬ ಆರೋಗ್ಯವಂತನನ್ನು ಕಚ್ಚಿದಾಗ ಅವನಿಗೂ ಈ ರೋಗ ಹರಡುತ್ತದೆ.

ಹೀಗಾಗಿ ನಾಯಿ ಕಚ್ಚಿದ ತಕ್ಷಣ ಚಿಕಿತ್ಸೆ ಪಡೆದುಕೊಂಡು 10 ದಿನಗಳವರೆಗೂ ಅದನ್ನು ಗಮನಿಸಬೇಕು. ಅಕಸ್ಮಾತ್ ಆ ನಾಯಿ ಸತ್ತರೆ, ತಕ್ಷಣ ವೈದ್ಯರಿಂದ ಆ್ಯಂಟಿ ರೇಬೀಸ್ ಲಸಿಕೆ ಹಾಕಿಸಿಕೊಳ್ಳಬೇಕು. ಕೊಡಗಿನ ಕಡೆ ಹೆಚ್ಚಿನ ಮನೆಗಳಲ್ಲಿ ನಾಯಿ ಸಾಕುವುದರಿಂದ ಇತ್ತ ಗಮನ ಹರಿಸುವುದು ಸೂಕ್ತ.

ನಿಸರ್ಗದ ಮಡಿಲಲ್ಲಿ ತಲಕಾವೇರಿ ಕ್ಷೇತ್ರ

ಅಂಬ್ರಾಟಿ ಭಗವತಿ ಪ್ರಸಾದ್ ತನ್ಮಯ್ಯ, ಭಾಗಮಂಡಲ

ಭಾರತವು ಪವಿತ್ರ ತೀರ್ಥಕ್ಷೇತ್ರಗಳ ಪುಣ್ಯಭೂಮಿಯಾಗಿದೆ. ಹಿಮಾಚಲ ಪರ್ಯಂತ ಅವಲೋಕಿಸುವಾಗ ಕಂಡು ಬರುವ ಪುಣ್ಯಕ್ಷೇತ್ರಗಳಿಗೆ ಇತಿ ಮಿತಿ ಎನ್ನುವುದೇ ಇಲ್ಲ. ಪುರಾಣ ಪ್ರಸಿದ್ಧವಾದ ಗಂಗಾ, ಯಮುನಾ, ಸಿಂಧೂ ಮೊದಲಾದ ನದಿಗಳು ಉತ್ತರ ಭಾರತದಲ್ಲಿ ಪ್ರಸಿದ್ಧ ವಾಗಿರುವಂತೆ ದಕ್ಷಿಣ ಭಾರತದಲ್ಲಿ ಕೃಷ್ಣ, ಕಾವೇರಿ, ತುಂಗಭದ್ರಾ ನದಿಗಳೂ ಪಾಪ ನಾಶಿನಿಗಳೇ ಆಗಿವೆ. ಇವುಗಳಲ್ಲಿ ಜನರು ಮಿಂದು ಪುನೀತರಾಗುತ್ತಾರೆ. ದಕ್ಷಿಣದ ಪವಿತ್ರ ನದಿಗಳಲ್ಲಿ ಕಾವೇರಿ ನದಿಯನ್ನು "ದಕ್ಷಿಣ ಗಂಗೆ" ಎಂದೇ ಕರೆಯುತ್ತಾರೆ. ಈ ಪುಣ್ಯ ನದಿಯ ಮೂಲ ಸ್ಥಾನವೇ ಕೊಡಗಿನ ತಲಕಾವೇರಿ. ಈ ಕ್ಷೇತ್ರವು ಕಾವೇರಿ ನದಿಯ ಉಗಮ ಸ್ಥಾನವಾಗಿರದೆ ಹಲವಾರು ಶ್ರೇಷ್ಠ ಮುನಿಗಳು ತಪಸ್ಸು ಮಾಡಿದ ಪುಣ್ಯ ಭೂಮಿಯೂ ಆಗಿದೆ.

ಮೂಲ ಕಾವೇರಿಯ ಕ್ಷೇತ್ರವು ಪುರಾಣದಂತೆ ಈ ಕ್ಷೇತ್ರದಲ್ಲಿ ಕವೇರನೆಂಬ ಮುನಿಯೊಬ್ಬನಿದ್ದನು. ಅವನು ತನಗೆ ಸಂತಾನವಿಲ್ಲದೆ ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ಸಂತಾನದ ಬಯಕೆಯನ್ನು ಮುಂದಿಟ್ಟನು. ಬ್ರಹ್ಮದೇವನು ತನ್ನ ಮಾನಸ ಪುತ್ರಿಯಾದ ಲೋಪಮುದ್ರೆಯನ್ನು ಕವೇರನಿಗೆ ದತ್ತು ಪುತ್ರಿಯಾಗಿ ಕೊಟ್ಟನು. ಕವೇರನು ಲೋಪಮುದ್ರೆಯನ್ನು ಅಗಸ್ತ್ಯಮುನಿಗೆ ಮದುವೆ ಮಾಡಿಕೊಟ್ಟನು. ಆದರೆ ಲೋಪಮುದ್ರೆಯು ಅಗಸ್ತ್ಯನೊಂದಿಗೆ ತನ್ನ ವೈವಾಹಿಕ ಜೀವನವನ್ನು ದೀರ್ಘ ಕಾಲ ಮುಂದುವರಿಸಲು ಇಷ್ಟಪಡದೆ ಪತಿಯು ಸ್ನಾನಾರ್ಥಿಯಾಗಿ ಕನಿಕೆ ನದಿಗೆ ಹೋಗಿರುವ ಸಮಯದಲ್ಲಿ ಲೋಕಕಲ್ಯಾಣಕ್ಕಾಗಿ ಜಲರೂಪವಾಗಿ ಅಗಸ್ತ್ಯನ ಕಮಂಡಲವಿನಲ್ಲಿದ್ದ ಆಕೆ ಕಾವೇರಿ ಎಂಬ ಹೆಸರಿನಲ್ಲಿ ಬ್ರಹ್ಮಗಿರಿಯ ಮಡಿಲಲ್ಲಿದ್ದ ಬ್ರಹ್ಮಕುಂಡಕ್ಕೆ ಪ್ರವಹಿಸಿದಳು. ಕಾವೇರಿಯು ನದಿಯಾಗಿ ಉದ್ಭವಿಸಿದ ದಿನವನ್ನು "ತೀರ್ಥೋದ್ಭವ ಪುಣ್ಯಕಾಲವೆಂದು ಆಚರಿಸಿಕೊಂಡು ಬರುವ ಸಂಪ್ರದಾಯ ನಡೆದು ಬಂದಿದೆ. ತುಲಾ ಸಂಕ್ರಮಣ ದಂದು ಈ ಪುಣ್ಯ ತೀರ್ಥೋದ್ಭವವಾದ ಸಮಯವಾಗಿದೆ. ತುಲಾ ಸಂಕ್ರಮಣ ದಂದು ಕೊಡಗಿನ ಸಹಸ್ರಾರು ಭಕ್ತರು ಮತ್ತು ತಮಿಳುನಾಡು, ಕೇರಳ ಮೊದಲಾದ ಹೊರ ರಾಜ್ಯಗಳಿಂದಲೂ ಯಾತ್ರಾರ್ಥಿಗಳಾಗಿ ಬಂದು ಸ್ನಾನ ಮಾಡುತ್ತಾರೆ. ಪ್ರತೀ ವರ್ಷ ಅಕ್ಟೋಬರ್ 17 ರಂದು ಪುಣ್ಯ ಕಾಲದಲ್ಲಿ ತೀರ್ಥೋದ್ಭವವಾಗುತ್ತದೆ.

ತಲಕಾವೇರಿ ಕ್ಷೇತ್ರವು ಸಮುದ್ರ ಮಟ್ಟದಿಂದ ಸುಮಾರು ನಾಲ್ಕು ಸಾವಿರದ ನೂರ ತೊಂಬತ್ತು ಅಡಿಗಳಷ್ಟು ಉನ್ನತ ವಾಗಿದ್ದು ಪ್ರಕೃತಿ ಸೌಂದರ್ಯದಿಂದ ನಿಸರ್ಗ ಪ್ರೇಮಿಗಳನ್ನು ಆಕರ್ಷಿಸುತ್ತಿದೆ. ಬ್ರಹ್ಮಗಿರಿ ಬೆಟ್ಟವು ಪಶ್ಚಿಮ ಘಟ್ಟಗಳ ಶಿಖರದಲ್ಲಿ ಚಿಕ್ಕ ಚಿಕ್ಕ ಏಳು ಹೊಂಡ ಗಳಿದ್ದು ಅವುಗಳನ್ನು "ಸಪ್ತರ್ಷಿ ಕುಂಡ" ಗಳೆಂದು ಕರೆಯುತ್ತಾರೆ. ಇಲ್ಲಿಂದ ನೋಡ ಬೇಕು ತಲಕಾವೇರಿಯ ಸುತ್ತ ಮುತ್ತಲಿನ ಪ್ರಕೃತಿ ಸೌಂದರ್ಯವನ್ನು. ನೋಡಿದಷ್ಟು ನೋಡೋಣವೆನಿಸುವಷ್ಟು ಕಣ್ಮನ ಸೆಳೆಯುವ ನಿಸರ್ಗದ ರಮಣೀಯ ದೃಶ್ಯ ಗಳು ಬೆಟ್ಟದಿಂದ ಗೋಚರಿಸುತ್ತವೆ. ಸೂರ್ಯೋದಯದಲ್ಲಿ ಪೂರ್ವ ದಿಗಂತದ ಮೇಲೆ ಸೂರ್ಯನ ಕೆಂಪಾದ ಬಿಂಬವು ಮೇಲೆರುವ ಸೊಬಗು ಪ್ರೇಕ್ಷಕ ವರ್ಗದ ಮನಸ್ಸನ್ನು ಸೆಳೆಯುತ್ತದೆ. ಅರಬ್ಬಿ ಸಮುದ್ರದಲ್ಲಿ ಸೂರ್ಯನು ಮುಳುಗುತ್ತಿರುವ ದೃಶ್ಯ ನಯನ ಮನೋಹರವಾಗಿದೆ. ಆದರೆ ಈ ದೃಶ್ಯವನ್ನು ವರ್ಷದ ಹೆಚ್ಚಿನ ದಿನಗಳಲ್ಲಿ ಕಾಣಲು ಸಾಧ್ಯವಾಗುವುದಿಲ್ಲ ಯಾಕೆಂದರೆ ಬೇಸಿಗೆಯ ಎರಡು ತಿಂಗಳು ಬಿಟ್ಟರೆ ಉಳಿದ ಸಮಯದಲ್ಲಿ ಮೋಡಗಳು ಕವಿದಿರುವುದರಿಂದ ಅಥವಾ ಮುಸುಕಿರುವುದರಿಂದ ದೂರಕ್ಕೆ ಕಾಣಿಸುವುದೇ ಇಲ್ಲ. ಮಳೆಗಾಲದಲ್ಲಿ ಇಲ್ಲಿಯ ಉತ್ತುಂಗ ಶೃಂಗಗಳು ಹಚ್ಚ ಹಸುರಾಗಿದ್ದು, ಬೆಟ್ಟಗಳ ತಪ್ಪಲಲ್ಲಿ ಬೆಳೆದು ನಿಂತ ದಟ್ಟವಾದ ಕಾಡು ಕೂಡಾ ಹಸುರಾಗಿ ಕಂಗೊಳಿಸುತ್ತದೆ.

ಬ್ರಹ್ಮಗಿರಿಯಿಂದ ಮೆಟ್ಟಲಿಳಿದು ಕೆಳಗೆ ಹೋದರೆ ಅಗಸ್ತ್ಯೇಶ್ವರ ಗುಡಿ, ಗಣಪತಿ ಗುಡಿ, ಅಶ್ವತ್ಥನಾರಾಯಣ ಎಂದೇ ಪ್ರಸಿದ್ಧವಾಗಿರುವ ಅಶ್ವತ್ಥಮರ ಮತ್ತು ಕಾವೇರಿಗುಡಿ ಇವುಗಳಿವೆ. ಕಾವೇರಿ ಗುಡಿಯ ಮುಂದೆ ಕಾವೇರಿಯು ಜಲರೂಪದಲ್ಲಿ ಉದ್ಭವಿಸಿದ ಪವಿತ್ರ ಕುಂಡಿಗೆ ಇದೆ. ಕಾವೇರಿಗುಡಿಯ ಮುಂದೆ ಸ್ನಾನದ ಕೊಳವಿದೆ. ಇಲ್ಲಿ ಭಕ್ತಾದಿಗಳು ಮಿಂದು ಪಾಪ ಮುಕ್ತರಾಗುತ್ತಾರೆ.

ಒಟ್ಟಿನಲ್ಲಿ ತಲಕಾವೇರಿ ಕ್ಷೇತ್ರಕ್ಕೆ ಭೇಟಿ ಕೊಡುವ ಭಕ್ತಾದಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ನಿಸರ್ಗದ ಮಡಿಲಲ್ಲಿ ಶೋಭಿಸುತ್ತಿರುವ ತಲಕಾವೇರಿ ಕ್ಷೇತ್ರದಲ್ಲಿ ಭಕ್ತಿ ಮತ್ತು ಪ್ರಕೃತಿ ಸೌಂದರ್ಯಗಳು ಒಂದೆಡೆ ಸಮಾವೇಶವಾಗಿರುವುದನ್ನು ಒಮ್ಮೆ ಕಂಡು ಅನುಭವಿಸಿದವರು ಮತ್ತೊಮ್ಮೆ ಕಂಡು ಆನಂದಿಸಲು ಬಂದೇ ಬರುತ್ತಾರೆ. ●

ಗೌಡರ ವಿವಾಹ ಪದ್ಧತಿ

[ಹಿಂದಿನ ಸಂಚಿಕೆಯಿಂದ]

ವಧುವಿನ ಮನೆಯಲ್ಲಿ :

ಚಪ್ಪರ ಹಾಕುವಲ್ಲಿಯಿಂದ ಹಿಡಿದು ತಂದೆ ತಾಯಿ ಸೆರಗು ಹಣ ಕಟ್ಟುವಲ್ಲಿಯವರೆಗೆ ಎಲ್ಲಾ ಶಾಸ್ತ್ರಗಳು ಗಂಡಿನ ಮನೆಯಲ್ಲಿ ನಡೆದ ರೀತಿ ವಧುವಿನ ಮನೆಯಲ್ಲೂ ನಡೆದಿರುತ್ತದೆ. ಸೋದರ ಮಾವ ಸೆರಗಿನ ಹಣ ಕಟ್ಟುವುದನ್ನು ಹೆಣ್ಣಿಗೆ, ಹೆಣ್ಣೊಳಿಸುವ ಸಮಯದಲ್ಲಿ ಕಟ್ಟುವರು. ವರನಿಗೆ ವರನ ಮನೆಯಿಂದ ಕಳುಹಿಸಿಕೊಡುವ ಸಮಯದಲ್ಲಿ ಕಟ್ಟುವರು. ವರನ ಮನೆಯಿಂದ ಕಳುಹಿಸಿದ ಕೊಡಿಯಾಲು ವಧುವಿನ ಮನೆಗೆ ತಲುಪಿ, ಯೋಗ ಕ್ಷೇಮ ವಿಚಾರಿಸಿ, ಅತಿಥಿ ಸತ್ಕಾರ ಸ್ವೀಕರಿಸಿದ ನಂತರ ಊರು ಗೌಡರು ಮತ್ತು ಮಡಿವಾಳನು ಮೇಲ್ಕಟ್ಟನ್ನು ಕಟ್ಟುವುದು. ನೆಲ್ಲಕ್ಕಿ ಅಡಿಯಲ್ಲಿ ಸೋದರ ಮಾವ ಕಾಸ್ತಾಳಿ ಕಟ್ಟುವುದರಿಂದ ಹಿಡಿದು, ಎಣ್ಣೆ ಅರಸಿನ, ಸ್ನಾನ, ಗಂಗೆ ಪೂಜೆ ಮಾಡಿ ತಂದೆ-ತಾಯಿ ಸೆರಗಿನ ಹಣ ಕಟ್ಟುವಲ್ಲಿಯವರೆಗಿನ ಎಲ್ಲಾ ಶಾಸ್ತ್ರ ಮಾಡಿ ನೆಲ್ಲಕ್ಕಿ ಅಡಿಯಲ್ಲಿ ಹಸೆಗೆ ಸರಿಯಾಗಿ ಕೂರಿಸುವುದು. ಕೆಲವು ಕಡೆ ಈಗಲೂ ಪದ್ಧತಿ ಪ್ರಕಾರ ವರನ ದಿಬ್ಬಣ ಬಂದ ನಂತರವೇ ಮದುರಂಗಿ ಶಾಸ್ತ್ರ ಮಾಡುವರು. ಏಕೆಂದರೆ ಎರಡು ಕೈಗಳಿಗೂ ಮದುರಂಗಿ ಇಟ್ಟರೆ ಮದುವೆಯಾದಂತೆ ಮತ್ತು ಮದುವೆ ನಡೆಯಲೇಬೇಕು ಎಂದು ಇದೆ. ಎರಡು ಕೈಗಳಿಗೆ ಮದುರಂಗಿ ಇಡುವುದು ಮುತ್ತೈದೆತನಕ್ಕೆ ಸೇರಿದುದು. ಆದುದರಿಂದ ಕನ್ಯೆಗೆ ವರನ ದಿಬ್ಬಣ ಬಂದು ತಲುಪುವವರೆಗೆ ಇಲ್ಲವೇ ಕೊಡಿಯಾಳುವಿನ ಆಗಮನದ ನಂತರವಾದರೂ ಮದುರಂಗಿ ಶಾಸ್ತ್ರವನ್ನು ಮಾಡಿ ಮುಗಿಸಿ, ಕನ್ಯೆಯ ಕಡೆಯವರು ಅಕ್ಕಿ ಮುಹೂರ್ತದ ಕ್ರಮ ಮಾಡುವಂತಿದ್ದರೆ ಅಕ್ಕಿ ಮುಹೂರ್ತವನ್ನು ಮುಗಿಸುವುದು. ಹುಡುಗಿಗೆ ತಂದೆ-ತಾಯಿಯಿಂದ ಕೊಡುವ ಬಳುವಳಿ ಸಾಮಾನಿನ ಪಟ್ಟಿ ಮಾಡಿ ಅದನ್ನು ಪೆಟ್ಟಿಗೆಗೆ ತುಂಬಿಸಿ ಗಂಡನ ದಿಬ್ಬಣ ಬರುವುದನ್ನು ನಿರೀಕ್ಷಿಸುತ್ತಾ ಹಸೆ ಚಾಪೆಯಲ್ಲಿ ಹುಡುಗಿಯನ್ನು ಕೂರಿಸುತ್ತಾರೆ.

ಪೆಟ್ಟಿಗೆ ತುಂಬುವುದು :

ವಧುವಿನ ಮನೆಯಲ್ಲಿ ಮುಹೂರ್ತದಿಂದ ಏಳಿಸಿ ಊಟವಾದ ನಂತರ ದಿಬ್ಬಣ ಬರುವುದಕ್ಕೆ ಮೊದಲು ವಧುವಿನ ಸಮಕ್ಷಮದಲಿ ವಧುವಿನ ತಾಯಿ ಅಥವಾ ಹಿರಿಯರು ಮೇಲ್ಕಟ್ಟಿನಡಿಯಲ್ಲಿ ನಂದಾದೀಪಕ್ಕೆ ಅಕ್ಕಿ ಹಾಕಿ ನಮಸ್ಕಾರ ಮಾಡಿ ಒಂದು ಹರಿವಾಣದಲ್ಲಿ ಅಕ್ಕಿ ವೀಳ್ಯ ಅಡಿಕೆ ಇಟ್ಟು ಮೂರು ಸಲ ಶೇಷೆ ಹಾಕಿ ಕೈ ಮುಗಿದು ಪೆಟ್ಟಿಗೆಯಲ್ಲಿ ವೀಳ್ಯದೆಲೆ ಅಡಿಕೆ ಇಟ್ಟು ಕೈಮುಗಿಯಬೇಕು. ಆಗ ಊರು ಗೌಡರು ಎಲ್ಲರೂ ಸೇರಿ ವಧುವಿಗೆ ತಂದೆ ತಾಯಿಯ ಕಡೆಯಿಂದ ಕೊಡುವ ಎಲ್ಲಾ ಬಳುವಳಿ ಸಾಮಾನುಗಳನ್ನು ಪೆಟ್ಟಿಗೆಯಲ್ಲಿ ತುಂಬಿಸಿ ಅದರ ವಿವರವನ್ನು ಒಂದು ಪಟ್ಟಿ ಮಾಡಿ, ಅದರ ಒಂದು ಪ್ರತಿಯನ್ನು ಪೆಟ್ಟಿಗೆಯ ಮೇಲ್ಭಾಗದಲ್ಲಿ ಇಟ್ಟು, ಇನ್ನೊಂದು ಪ್ರತಿಯನ್ನು ವಧುವಿನ ತಂದೆಗೆ ಕೊಡುವರು.

ವರನ ದಿಬ್ಬಣ ವಧುವಿನ ಮನೆಯಲ್ಲಿ :

ವರನ ದಿಬ್ಬಣವು ವಧುವಿನ ಮನೆಗೆ ಆಗಮಿಸಿದಾಗ, ವಧುವಿನ ಕಡೆಯವರು ದಿಬ್ಬಣದವರಿಗೆ ಚಪ್ಪರದಿಂದ ಹೊರಗೆ ಪ್ರತ್ಯೇಕ ಸ್ಥಳ ಏರ್ಪಡಿಸಿ ಕೂರುವುದಕ್ಕೆ ಅನುಕೂಲ ಮಾಡಿಕೊಡುವರು. ನೀರು ಮತ್ತು ವೀಳ್ಯವನ್ನು ವಧುವಿನ ಕಡೆಯ ಗಂಡಸರು ಗಂಡಿನ ಕಡೆಯ ಪ್ರತ್ಯೇಕ ಗಂಡಸರಿಗೂ, ಹೆಂಗಸರು ಪ್ರತ್ಯೇಕ ಹೆಂಗಸರಿಗೂ ಕೊಟ್ಟು ಪದ್ಧತಿಯಂತೆ ಮಾತನಾಡಿಸುವುದು. ಮನೆಯ ಅಕ್ಕಂದಿರು ಪ್ರತ್ಯೇಕ ದಿಬ್ಬಣದವರನ್ನು ನೀರು ಚಾಪೆ ಕೊಟ್ಟು ಮಾತನಾಡಿಸುವುದು.

ಮುಖ್ಯಸ್ಥರ ಪ್ರವೇಶ :

ದಿಬ್ಬಣ ಮಾತನಾಡಿಸಿದ ನಂತರ ದಿಬ್ಬಣದ ಕಡೆಯ ನೆಂಟರು ನಿಯಮದಂತೆ ಕೋಟು ಪಂಚೆಯ ಪೋಷಾಕು ಹಾಕಿ ಕೊಡೆ-ಕೋಲಾಗಿ ಮೂರು ಜನ ಗಂಡಸರು ನೆಂಟರಾಗಿ ವಧುವಿನ ಮನೆಗೆ ಹೋಗುವುದು. ಅಲ್ಲಿ ಅವರು ಗಂಡಿನ ಕಡೆಯಿಂದ ದಿಬ್ಬಣದಲ್ಲಿ ಬಂದ ನೆಂಟರು ನಾವು ಎಂದು ಹೇಳುವುದು. ಅವರಿಗೆ ನೀರು ವೀಳ್ಯ ಕೊಟ್ಟು ಸ್ವಾಗತಿಸುವರು, ಮಾತ್ರವಲ್ಲ ಕೊಡೆ ಕೋಲನ್ನು ಕೇಳಿ ತೆಗೆದಿಡುವರು. ನೆಂಟರು ನೆಲ್ಲಕ್ಕಿ ಅಡಿಯಲ್ಲಿ ಕುಳಿತಿರುವ ವಧುವಿಗೆ ಹಣ ಕಟ್ಟಿ ಆಶೀರ್ವದಿಸಿ ದಿಬ್ಬಣದವರು ಬಣ್ಣ ಬಂಗಾರು ತರುವುದಕ್ಕೆ ಸಮಯ ನಿಶ್ಚಯಿಸಿ ತಮ್ಮ ಕೊಡೆ ಕೋಲನ್ನು ಮರಳಿ ಪಡೆದು ವಾಪಸ್ಸು ಬರುವುದು.

ಹಾಲು ಕೊಡುವುದು :

ಮದುಮಣ್ಣಸಿಗೆ ವಧುವಿನ ತಾಯಿ ಹಾಲು ತಂದು ಕೊಡುವುದು.

[ಮುಂದುವರಿಯುವುದು]

ಕೃಪೆ :
ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಶುಭ ವಿವಾಹ

ದಿನಾಂಕ 22-10-97ನೇ ಬುಧವಾರ ಕುಶಾಲನಗರದ ಗೌಡ ಸಮಾಜದಲ್ಲಿ ಮೂಟೇರ ನಂಜುಂಡನವರ ಪುತ್ರ ಶ್ರೀ ನಂಜಪ್ಪ (ವಿಜು) ರವರು ತುಮುತ್ತಜ್ಜಿರ ಸೋಮಯ್ಯನವರ ಪುತ್ರಿ ನಳಿನಿಯವರ ಕೈ ಹಿಡಿಯಲಿದ್ದಾರೆ. ಇವರಿಗೆ "ಕೊಡಗು ಸಂಗಾತಿಯ" ಹಾರ್ದಿಕ ಶುಭಾಶಯಗಳು.

ಗಂಗರಸರ ರಾಜಧಾನಿ ತಲಕಾಡು

[ಮುಂದುವರಿದ ಭಾಗ]

ಹಿಂದಿನಂತೆಯೇ ಈಗಲೂ ಕೆಲವು ಪ್ರದೇಶಗಳಲ್ಲಿ ಇವರ ಸಂಬಂಧವು ಅತಿ ಕಡಿಮೆ ಪ್ರಮಾಣದಲ್ಲಿ ನಡೆದುಕೊಂಡು ಬರುತ್ತಿದೆ.

ಸಂಪ್ರದಾಯ

ಎಲ್ಲಾ ಮತ, ಧಾರ್ಮಿಕರ ಜೊತೆಯಲ್ಲಿ ಸೌಹಾರ್ದದಿಂದ ಬಾಳುತ್ತಿರುವುದು ಇಂದಿಗೂ ಮಾದರಿಯಾಗಿದೆ. ಇದರಲ್ಲಿ

ಟಿ. ಆರ್ ಮುದ್ದೇಗೌಡ, ಮೈಸೂರು.

ಕೆಲವರು ವೈಷ್ಣವ, ಮತ್ತೆ ಕೆಲವರು ಶೈವ ಸಂಪ್ರದಾಯಕ್ಕೆ ಸೇರಿದವರಾಗಿರುತ್ತಾರೆ. ಆದರೆ ಮೂಲತಃ ಇವರೆಲ್ಲಾ ಶೈವರೇ ಎಂದು ಶಾಸನಗಳಿಂದ ಸಾದರವಾಗುತ್ತವೆ.

ವೈಷ್ಣವ ಸಂಪ್ರದಾಯದಲ್ಲಿ ಕೆಲವರು ನರಸಿಂಹ ದೇವರ ಪಂಗಡದವರಾಗಿರುತ್ತಾರೆ. ಈ ಬಗ್ಗೆ ಮಳವಳ್ಳಿಯ ಮಾರಳ್ಳಿ ಶಾಸನ ದಿಂದ ತಿಳಿದುಬರುತ್ತದೆ. ಈ ಬಗ್ಗೆ 120 [11 ಮಾ.ವ. 104] ಹಾಗೂ 1ರಿಂದ 25ರ ವರೆಗೆ ನಮೂದಾಗಿರುತ್ತದೆ.

ಪುರಿಗಾಲಿ ಶಾಸನ

1 ರಿಂದ 14ರವರೆಗೆ 122 [11ಮಾ. ವ. 87 ರಿಂದ 1947 ರಿಂದ 56–40 ಈ ಜನಾಂಗಕ್ಕೆ ಕೊಂಗಣಿಕೇರಿ ಎಂದು ನಮೂದಾಗಿರುತ್ತದೆ. ಹಾಲಿ ತಲಕಾಡಿನ ಕೀರ್ತಿನಾರಾಯಣ ಹಾಗೂ ವೈಕುಂಠ ನಾರಾಯಣ ದೇವರುಗಳ ಅಗ್ರಪೂಜೆ ಹಾಗೂ ಉತ್ಸವಗಳನ್ನು ಈ ವಂಶಸ್ತರಿಂದಲೇ ಪ್ರಾರಂಭಿಸುತ್ತಿರುವುದು ಈಗಲೂ ಜೀವಂತ ನಿದರ್ಶನಗಳಾಗಿವೆ.

ಶೈವ ಸಂಪ್ರದಾಯ

ಈ ಸಂಪ್ರದಾಯದ ಪಂಗಡದವರಿಗೆ ಭೈರವ, ದುರ್ಗಾ [ಕಾಳಿಕಾಂಬಾ] ಅಥವಾ ವೀರಭದ್ರ ಪ್ರಧಾನ ಕುಲ ಮತ್ತು ಮನೆ ದೇವರುಗಳು. ಇವರು ಹಬ್ಬ ಹರಿದಿನಗಳಲ್ಲಿ ತಮ್ಮ ಆಯುಧಗಳಾದ ಕತ್ತಿ [3ರಿಂದ 4 ಅಡಿ ಎತ್ತರ] ಗಳನ್ನು ಪೂಜಿಸುವುದು, ಹಾಗೂ ಕುಲದೇವರಾದ ತಲಕಾಡು ವೀರಭದ್ರನಿಗೆ ವಿಶೇಷ ಪೂಜೆ ಮುಂತಾದವುಗಳನ್ನು ಆಚಾರ್ಯರ ಮುಖೇನ ಮಾಡಿಸುವುದು ಈಗಲೂ ನಡೆದುಕೊಂಡು ಬರುತ್ತಿದೆ. ಕೆಲವರು ವರದರಾಯಸ್ವಾಮಿ ಬಣಕ್ಕೆ ಸೇರಿರುವುದು. ಹೊಂಗನೂರು [ಚಾ. ನ. 165, 164ನೇ ಶಾಸನದಲ್ಲಿ]ನ ದೇವಸ್ಥಾನದಲ್ಲಿ ಈ ಪ್ರದೇಶವನ್ನು ಕೊಂಗಣಿವರ್ಮನ ಆಳ್ವಿಕೆಗೆ ಸೇರಿರುತ್ತೆಂದು ನಮೂದಾಗಿರುವುದರಿಂದ ಈ ವಂಶಸ್ತರು ಚಾಮರಾಜನಗರ ತಾಲ್ಲೋಕು ಹೊಂಗನೂರುವಿನಲ್ಲಿ ಈಗಲೂ ನೆಲೆಸಿರುವುದು ಜೀವಂತ ನಿದರ್ಶನವಾಗಿದೆ.

ಸಂಪ್ರದಾಯ ಉಳಿವು

ಹಳೆಯಯುಳಿಕೆಗಳಂತೆ, ಹಿಂದಿನ ಅದ್ದೂರಿ ಆಡಂಬರಗಳಿದ್ದರೂ ಇಲ್ಲದಿದ್ದರೂ ಇವರ ಮದುವೆಗಳಲ್ಲಿ ಪಲ್ಲಕ್ಕಿ, ಕತ್ತಿ [ಅಥವಾ ಯಾವುದಾದರೂ ಆಯುಧ] ಅರಳಿಮರದ ಕೊಂಬೆ, ಅಗ್ನಿಯ ಮುಂದೆ ನಿಂತು ಆಚಾರ್ಯರಿಂದ ಮದುವೆ ಮುಂತಾದ ಶುಭ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರ ಅಂತ್ಯ ಶವ ಸಂಸ್ಕಾರ ಕೂಡ ಅಗ್ನಿಯಲ್ಲಿಯೇ ದಹನ ಕ್ರಿಯೆಯಲ್ಲಿ ಕೊನೆಗೊಳ್ಳುತ್ತದೆ.

ವೃತ್ತಿ

ಹುಟ್ಟಿನಿಂದ ಒಕ್ಕಲಿಗರಾಗಿರುವುದರಿಂದ ವ್ಯವಸಾಯವೇ ಇವರ ಮೂಲ ಕಸುಬಾಗಿರುತ್ತದೆ. ಹಾಗೂ ಇವರು ಬೆಳೆದ ದವಸ ಧಾನ್ಯಗಳನ್ನು ಅನೇಕ ಧರ್ಮ ಕಾರ್ಯಗಳಿಗೆ ಉಪಯೋಗಿಸುತ್ತಿರುವುದು ಈಗಲೂ ಕಂಡುಬರುತ್ತದೆ. ಅನ್ನ ಛತ್ರಗಳನ್ನು, ದೇವರ ಸಮಾರಾಧನೆಗಳನ್ನು ಮುಡುಕುತೊರೆ ಬಿಳಿಗಿರಿರಂಗನ ಬೆಟ್ಟಗಳಲ್ಲಿ ಅರವಟ್ಟಿಗೆಗಳನ್ನು ಪ್ರತಿ ವರ್ಷವೂ ಸಾವಿರಾರು ಜನರಿಗೆ ದಾಸೋಹ ರೀತಿಯಲ್ಲಿ ಅನ್ನ ಸಂತರ್ಪಣೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಇವರು ವಾಸಿಸುತ್ತಿದ್ದ ಬೀದಿಯಲ್ಲಿ ಈಗಲೂ ಧರ್ಮ ಚಾವಡಿಗಳಿರುವುದು ಕೂಡ ಜೀವಂತ ನಿದರ್ಶನಗಳಾಗಿವೆ. ಇವರು ಕಟ್ಟಿರುವ ಒಂದು ನೀರು ಕುಡಿಯುವ ಕೆರೆಗೆ ಈಗಲೂ ಕೊಂಗಣವರ್ಮನ ಕೆರೆ ಅನ್ನುವ ಬದಲು ಗ್ರಾಮ್ಯ ಭಾಷೆಯಲ್ಲಿ ಕೊಂಗನಕೆರೆ ಎಂದು ಕರೆಯುತ್ತಿದ್ದಾರೆ.

ಉಪಸಂಹಾರ

ಗಂಗರ ಮೂಲ ಪುರುಷರಾದ ದಢಿಗ ಮಾಧವರ, ಬಿರುದುಗಳಾದ ಕೊಂಗಣಿವರ್ಮ ಪೆರ್ಮಾನಡಿ ಬಗ್ಗೆ ಈಗಿನ ವಾಸ್ತವಂಶ ಜೊತೆಯಲ್ಲಿ ತಾಳೆ ಮಾಡಿ ನೋಡಿದಾಗ ವರ್ಮನ ಜನಾಂಗಕ್ಕೆ ಕೊಂಗರೆಂದು ಪೆರ್ಮಾನಡಿ ಎಂಬ ಬಿರುದು ಹೊಂದಿದ್ದವರ ಮನೆತನಕ್ಕೆ ಪೆರ್ಮೆಗೌಡರ ಮನೆ ಎಂದು ಕರೆಯಲ್ಪಡುತ್ತದೆ. ಈ ವಂಶಸ್ತರು ಹಾಸನ ಜಿಲ್ಲೆಯ ಹಾರನಹಳ್ಳಿ, ಬೇಲೂರು, ಅರಸೀಕೆರೆ, ಬಾಣಾವಾರಗಳಲ್ಲಿ ರೆಡ್ಡಿ ಜನಾಂಗ ಹಾಗೂ ಬಲ್ಲಾಳರೆಂದು ಕರೆಯಲ್ಪಡುತ್ತಾರೆ. ಗದಗ, ಬಾದಾಮಿಗಳಲ್ಲಿ ರೆಡ್ಡಿ ಜನಾಂಗವೆಂದು ಕರೆಯಲ್ಪಡುತ್ತಾರೆ. ಕೋಲಾರದಲ್ಲಿ ಪುರಸುನಾಡಿನ ಪುರಸು ಒಕ್ಕಲಿಗರ ಬೆಳವಕ್ಕಲಿಗರ್, ಬೆಳಕೊಡ್ ವಕ್ಕಲಿಗರು ಎಂದು ಕರೆಯಲ್ಪಡುತ್ತಾರೆ.

[ಮುಂದುವರಿಯುವುದು]

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು

ತಾರೀಖು 28–09–97ರಂದು ಮೇಲ್ಕಂಡ ಸಮಾಜದ ಆಶ್ರಯದಲ್ಲಿ ವಾರ್ಷಿಕ ಮಹಾಸಭೆ, ಕೈಲ್ ಮುಹೂರ್ತ ಹಬ್ಬದ ಆಚರಣೆ, ಡಾ|| ಕಾಯರ್‌ಮಾರ್ ವೀರಪ್ಪಗೌಡರ ಸ್ಮರಣಾರ್ಥ ಸಭಾಂಗಣ ಉದ್ಘಾಟನೆ ಹಾಗೂ ದಿ|| ನಿಡ್ಯಮಲೆ ಮುದ್ದಪ್ಪನವರ ಜನ್ಮ ಶತಾಬ್ಧಿಯನ್ನು ಆಚರಿಸಲಾಯಿತು.

ಪ್ರಾರಂಭದಲ್ಲಿ ಡಾ|| ವೀರಪ್ಪಗೌಡರ ಸ್ಮರಣಾರ್ಥ ಸಭಾಂಗಣವನ್ನು ಡಾ|| ಕೋಡಿ ಕುಶಾಲಪ್ಪ ಗೌಡರು ಉದ್ಘಾಟಿಸಿದರು. ಶ್ರೀ ಪಿ. ಕೆ. ಪೂವಯ್ಯನವರು ಆಯುಧ ಪೂಜೆಯನ್ನು ಮಾಡಿದ ನಂತರ ಕು|| ಸವಿತಾರವರ ಪ್ರಾರ್ಥನೆಯೊಂದಿಗೆ ಸಭೆ ಆರಂಭವಾಯಿತು. ಶ್ರೀ ಮಾವೋಜಿ ಜನಾರ್ಧನಗೌಡ, ಮಾಜಿ ಅಡ್ವೋಕೇಟ್ ಜನರಲ್‌ರವರ ಅಧ್ಯಕ್ಷತೆಯಲ್ಲಿ ದಿ|| ನಿಡ್ಯಮಲೆ ಮುದ್ದಪ್ಪನವರ ಜನ್ಮಶತಾಬ್ದಿಯನ್ನು ಆಚರಿಸಲಾಯಿತು. ಮುಖ್ಯ ಅಥಿತಿಯಾಗಿ ಸಭೆಗೆ ಆಗಮಿಸಿದ್ದ ಮಡಿಕೇರಿಯ ಮಾಜಿ ವಿಧಾನಸಭಾ

ನೂಜಿ ದಿನಕರ ಗೌಡ, ಕಾರ್ಯದರ್ಶಿ

ಸದಸ್ಯರೂ ಹಾಗೂ ಸ್ವಾತಂತ್ರ್ಯ ಹೋರಾಟಗಾರರೂ ಆದ ಶ್ರೀ ಪಾಂಡನ ಸುಬ್ಬಯ್ಯನವರು ದಿ|| ಮುದ್ದಪ್ಪನವರ ಭಾವಚಿತ್ರಕ್ಕೆ ದೀಪ ಬೆಳಗಿಸಿದರು. ಮತ್ತು ಶ್ರೀ ಮುದ್ದಪ್ಪನವರ ಜೀವನ ಚರಿತ್ರೆಯನ್ನೊಳಗೊಂಡ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಅನಂತರ ಸಮಾಜದ ಅಧ್ಯಕ್ಷರಾದ ಶ್ರೀ ಪೂಜಾರಿ ಮೊಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಮಾಜದ ಮಹಾಸಭೆ ಸೇರಿತು. ಸಮಾಜದ ಕಾರ್ಯದರ್ಶಿಯವರಾದ ಶ್ರೀ ನೂಜಿ ದಿನಕರ ಗೌಡರು ಸಮಾಜದ ವಾರ್ಷಿಕ ವರದಿಯನ್ನು ಮತ್ತು ಖಜಾಂಚಿಯಾದ ಶ್ರೀ ಮೊಟ್ಟೇರ ಕುಶಾಲಪ್ಪನವರು ವಾರ್ಷಿಕ ಲೆಕ್ಕಪತ್ರದ ವರದಿಯನ್ನು ಓದಿದರು. ಶ್ರೀಮತಿ ತಳೂರು ಪುಷ್ಪಲತಾರವರು ಮಹಿಳಾ ಘಟಕದ ವರದಿಯನ್ನು ಓದಿದರು.

ಪ್ರತಿಭಾನ್ವಿತರಾದ ಕು|| ಗೀತಾ ಮೋಂಟಡ್ಕ ಮತ್ತು ಶ್ರೀ ಕೆ. ಎಲ್. ಸತೀಶ್ ಹಾಗೂ ರ್‍ಯಾಂಕ್ ವಿಜೇತೆಯಾದ ಪ್ರಜ್ಞಾ ದೇವಿಪ್ರಸಾದ್‌ರವರನ್ನು ಹಾರಾರ್ಪಣೆ ಮಾಡಿ, ಫಲಪುಷ್ಪಗಳನ್ನಿತ್ತು, ನೆನಪಿನ ಕಾಣಿಕೆಯನ್ನು ನೀಡಿ ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಡಾ|| ಕೋಡಿ ಕುಶಾಲಪ್ಪ ಗೌಡರು ಸನ್ಮಾನಿಸಿದರು.

ವಕೀಲರಾದ ಶ್ರೀ ಪೊನ್ನೆಟ್ಟಿ ಪೊನ್ನಪ್ಪನವರು, ಶ್ರೀ ಮೋಂಟಡ್ಕ ಬಾಲಕೃಷ್ಣ ಗೌಡರು, ಶ್ರೀ ನಿಡ್ಯಮಲೆ ಪ್ರಕಾಶ್‌ರವರು, ಶ್ರೀ ನಿಡ್ಯಮಲೆ ಮುದ್ದಪ್ಪನವರ ಹಾಗೂ ಡಾ|| ಕೆ. ವೀರಪ್ಪಗೌಡರ ಗುಣಗಾನ ಮಾಡಿದರು. ಮೈಸೂರಿನ 'ಕೊಡಗು ಸಂಗಾತಿ' ಪತ್ರಿಕೆಯ ಗೌರವ ಸಂಪಾದಕರಾದ ಶ್ರೀ ಪಟ್ಟಡ ಪ್ರಭಾಕರ್‌ರವರು ಪತ್ರಿಕೆಯ ಅನಿವಾರ್ಯತೆಯ ಬಗ್ಗೆ ಮಾತನಾಡಿದರು. ಶ್ರೀ ಕೋಳಿಬೈಲು ನಾಣಯ್ಯನವರು ಕವನ ವಾಚನ ಮಾಡಿದರು. ಕುಮಾರಿ ಗೀತಾ ಮೋಂಟಡ್ಕರವರು ತಮ್ಮ ಮಿಮಿಕ್ರಿ ಕಾರ್ಯಕ್ರಮದಿಂದ ಸಭಿಕರನ್ನು ಆನಂದ ಸಾಗರದಲ್ಲಿ ತೇಲಾಡಿಸಿದರು.

ಶ್ರೀ ಪಾಂಡನ ಸುಬ್ಬಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡಿ, ದಿ|| ನಿಡ್ಯಮಲೆ ಮುದ್ದಪ್ಪನವರ ಧೀಮಂತ ವ್ಯಕ್ತಿತ್ವದ ಬಗ್ಗೆ ವಿವರಿಸಿ ಅವರ ಜನ್ಮಶತಾಬ್ಧಿಯನ್ನು ಆಚರಿಸಿ, ಅವರ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿರುವುದು ಯಥೋಚಿತ ಮತ್ತು ಅವರಿಗೆ ಜನಾಂಗದ ಬಗ್ಗೆ ಇದ್ದ ಅಭಿಮಾನಕ್ಕೆ ಸಂದ ಗೌರವವೆಂದು ಹೇಳಿದರು. ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದುದಕ್ಕಾಗಿ, ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರನ್ನು ಅಭಿನಂದಿಸಿದರು.

ಡಾ|| ಕೋಡಿ ಕುಶಾಲಪ್ಪಗೌಡರು ಮಾತನಾಡಿ ಗೌಡರ ಆಡುಭಾಷೆಗಳಾದ ಗೌಡಕನ್ನಡ [ಅರೆಗನ್ನಡ] ಮತ್ತು ತುಳು ಭಾಷೆಗಳ ಬಗ್ಗೆ ಸಮಾನ ಒಲವನ್ನು ತೋರಬೇಕೆಂದೂ ಹಾಗೂ ಅನ್ಯೋನ್ಯತೆಯಿಂದಿರಬೇಕೆಂದೂ ಆಶಯ ವ್ಯಕ್ತಪಡಿಸಿದರು. ಈ ಸಮಾರಂಭಕ್ಕೆ ತಮ್ಮನ್ನು ಆಹ್ವಾನಿಸಿದುದಕ್ಕಾಗಿ ಸಮಾಜವನ್ನು ಅಭಿನಂದಿಸಿದರು.

ಭೋಜನಾ ನಂತರ ಆಟೋಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧಾ ವಿಜೇತರಿಗೆ ಮುಖ್ಯ ಅಥಿತಿಯವರು ಬಹುಮಾನ ವಿತರಣೆ ಮಾಡಿದರು. ಅದಾದ ನಂತರ ವಿವಿಧ ಮನೋರಂಜನಾ ಕಾರ್ಯಕ್ರಮಗಳು ಜರಗಿದವು.

ಸಮಾಜದ ಕಾರ್ಯದರ್ಶಿಯವರಾದ ಶ್ರೀ ನೂಜಿ ದಿನಕರ ಗೌಡರು ವಂದನಾರ್ಪಣೆ ಮಾಡುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸೂಕ್ತಿ

ಮರದಲ್ಲಾಗಲಿ, ಕಲ್ಲಿನಲ್ಲಾಗಲಿ ದೇವರಿಲ್ಲ. ದೇವರಿರುವುದು ಮನಸ್ಸಿನ ಭಾವನೆಯಲ್ಲಿ.

ಸಂಗ್ರಹ : **ಕಾಶಿಪಳಂಗಪ್ಪ,** ಮಡಿಕೇರಿ

ಮರಗೋಡಿನಲ್ಲಿ ಜರುಗಿದ ಅಭೂತಪೂರ್ವ ಕೈಲ್ ಮುಹೂರ್ತ

"ಗೌಡ ಸಂಘಟನೆ"ಗೆ ಜನ ನಾಯಕರ ಕರೆ

ಕಾಫಿಯ ಬೀಡು, ಆರ್ಥಿಕ, ಶೈಕ್ಷಣಿಕ, ಸಧೃಢ ನಾಡು ಮರಗೋಡಿನಲ್ಲಿ ಅಕ್ಟೋಬರ್ 5 ರಂದು "ಮರಗೋಡು ಗೌಡಸಮಾಜ"ದ ಆಶ್ರಯದಲ್ಲಿ ವಿಜೃಂಭಣೆಯ ಕೈಲ್ ಮುಹೂರ್ತ ಜರುಗಿತು. ಅಂದು ಬೆಳಿಗ್ಗೆ 10-30 ಗಂಟೆಗೆ ಸರಿಯಾಗಿ ವಯೋವೃದ್ಧರೂ, ಸ್ವಾತಂತ್ರ್ಯ ಸೇನಾನಿಯೂ, ಮಾಜಿ ಶಾಸಕರೂ ಆದ ಪಾಂಡನ ಸುಬ್ಬಯ್ಯನವರು ಕುಲಗುರು ವೆಂಕಟೇಶ್ವರನಿಗೆ ಜ್ಯೋತಿ ಬೆಳಗಿಸಿ, ಕಾಯಿಗೆ ಗುಂಡು ಹಾರಿಸುವುದರ ಮೂಲಕ ಸಮಾರಂಭದ ತೆರೆ ಸರಿಸಿದರು.

ಸಮಾರಂಭವನ್ನು ಉದ್ಘಾಟಿಸಿದ ನಂತರ ಮಾತನಾಡಿದ ಅವರು ಗತಕಾಲದ ಘಟನೆಗಳನ್ನು ಸಭಿಕರಿಗೆ ನೆನಪಿಸಿ ಬಹಳ ಹಿಂದೆಯೂ ಇಲ್ಲಿ ಇಂತಹ ಕಾರ್ಯಕ್ರಮಗಳು ನಡೆಯುತ್ತಿದ್ದವು, ಇಂದಿಗೂ ನೀವು ಉಳಿಸಿಕೊಂಡಿದ್ದೀರಿ, ಸಮಾಜ ಎಂಬುದು ಜೇನುಗೂಡಿನಂತೆ, ಇಲ್ಲಿ ಎಲ್ಲರ ಪರಸ್ಪರ ಸಹಕಾರ ಅಗತ್ಯ. ನಾವು ರಾಜಕೀಯ ಬಿಟ್ಟು ಒಗ್ಗಟ್ಟಿನಿಂದ ಮುಂದುವರಿಯಬೇಕು, ಮಹಿಳೆಯರು ಅಡಿಗೆ ಮನೆ ವ್ಯಾಪ್ತಿಯಿಂದ ನಿಸ್ವಾರ್ಥವಾಗಿ ಹೊರಬರಬೇಕು. ನಮ್ಮ ಭವಿಷ್ಯಕ್ಕೆ ಯೋಗ್ಯ ಯುವ ಪೀಳಿಗೆಯನ್ನು ರೂಪಿಸಬೇಕು ಎಂದು ಕರೆ ನೀಡಿದ ಅವರು, ನಮ್ಮ ಸಂಸ್ಕೃತಿಯನ್ನು ಬೆಳೆಸುವಲ್ಲಿ ಗೌಡ ಸಂಸ್ಥೆಗಳು ಮುಂದಾಗಬೇಕೆಂದು ಮನವಿ ಮಾಡಿಕೊಂಡರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ 'ಕೊಡಗು ಗೌಡ ವಿದ್ಯಾ ಸಂಘ'ದ ಅಧ್ಯಕ್ಷರಾದ ಕುಯ್ಯುಮುಡಿ ಪೂರ್ಣಯ್ಯನವರು ಮಾತನಾಡಿ ಮರಗೋಡಿನಲ್ಲಿ ಶೇ. 90 ರಷ್ಟು ಜನ ಗೌಡಬಾಂಧವರೇ ಆಗಿದ್ದು, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವುದರಿಂದ ಸಮಾಜದ ಬೆಳವಣಿಗೆಗೆ ನಿಮ್ಮ ಸಹಕಾರ ಅತ್ಯಗತ್ಯ ಎಂದು ನುಡಿದರು. ಗೌಡ ವಿದ್ಯಾಸಂಘದ ವತಿಯಿಂದ ನಮ್ಮ ಯುವ ಜನತೆಗೆ ಯಾವುದೇ ರೀತಿಯ ಸಹಕಾರ ನೀಡಲು ಬದ್ಧನಾಗಿದ್ದೇನೆ ಎಂದು ಭರವಸೆ ನೀಡಿದರು. 'ಕೊಡಗು ಗೌಡ ಸಮಾಜ' ಮಡಿಕೇರಿ ಮತ್ತು ಕುಶಾಲನಗರದ ಉಪಾಧ್ಯಕ್ಷರಾಗಿರುವ ಕೋರನ ಪೂಣಚ್ಚನವರು ಮಾತನಾಡಿ ನಮ್ಮ ಸಂಸ್ಕೃತಿ ಭವ್ಯವಾದುದು, ನಾವಿಂದು ಅಂದಿಗಿಂತ ಸುಸ್ಥಿತಿಯಲ್ಲಿದ್ದೇವೆ. ನಮ್ಮಲ್ಲಿ ಹಲವಾರು ಪ್ರತಿಭೆಗಳಿದ್ದರೂ ಬೂದಿ ಮುಚ್ಚಿದ ಕೆಂಡದಂತಾಗಿವೆ. ಜನಾಂಗದ ಪ್ರತಿಯೊಬ್ಬರೂ ಸ್ವಾರ್ಥ ಬಿಟ್ಟು ಸಮಾಜ ಸೇವೆಯಲ್ಲಿ ತೊಡಗಿದರೆ, ನಮ್ಮ ಜನಾಂಗವನ್ನು ಉತ್ತುಂಗಕ್ಕೇರಿಸಬಹುದೆಂದು ಅಭಿಪ್ರಾಯಪಟ್ಟರು. ಕೊಡಗು ಗೌಡ ವಿದ್ಯಾ ಸಂಘದ ಯುವ ನಿರ್ದೇಶಕರು ಹಾಗೂ "ಕೊಡಗು ಸಂಗಾತಿ"ಯ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರ್‌ರವರು ಮಾತನಾಡಿ, ಪತ್ರಿಕೆಯನ್ನು ನಡೆಸುವುದು ತುಂಬಾ ದುಸ್ತರವಾದ ಕಾರ್ಯ ಈ ಹಿಂದೆಯೇ ಎರಡು ಪತ್ರಿಕೆಗಳು ವಿಫಲಗೊಂಡಿವೆ. ಆದುದರಿಂದ ಈ ಪತ್ರಿಕೆಯನ್ನು ಪ್ರೋತ್ಸಾಹಿಸಬೇಕೆಂದು ಮನಪೂರ್ವಕವಾಗಿ ವಿನಂತಿಸುತ್ತಾ, ಗೌಡ ಜನಾಂಗದ ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದೇ ಪತ್ರಿಕೆಯ ಉದ್ದೇಶ ಎಂದು ವಿವರಿಸಿದರು. 'ಕೊಡಗು ಗೌಡ ವಿದ್ಯಾ ಸಂಘ'ದ ಮಡಿಕೇರಿ, ಕಾರ್ಯದರ್ಶಿ ಅನಂತಕುಮಾರ್‌ರವರು ಅಂದಿನ ಸಭೆಯನ್ನು 1985ರ ಸುಳ್ಯದ ಗೌಡ ಸಮ್ಮೇಳನಕ್ಕೆ ಹೋಲಿಸಿ, ನಾವು ದೊಡ್ಡ ಸಂಖ್ಯೆಯಲ್ಲಿ ಕೊಡಗಿನಲ್ಲಿದ್ದರೂ ನಮ್ಮನ್ನು ಕಡೆಗಣಿಸಲಾಗಿದೆ ಎಂದು ನೊಂದು ನುಡಿದರು. ಮಡಿಕೇರಿಯಲ್ಲಿ ನಮ್ಮದೊಂದು ಸಮ್ಮೇಳನ ನಡೆಸಬೇಕಾಗಿದೆ ಎಂದು ಅವರು ಯುವ ಜನಾಂಗಕ್ಕೆ ಕರೆ ನೀಡಿದರು. ಜನಾಂಗಕ್ಕೆ ಪತ್ರಿಕಾರಂಗದ ಅಗತ್ಯವನ್ನು ಒತ್ತಿ ಹೇಳಿದ ಅವರು "ಕೊಡಗು ಸಂಗಾತಿ" ಯೊಡನೆ ಸಹಕರಿಸುವಂತೆ ಜನಾಂಗದವರಲ್ಲಿ ಮನವಿ ಮಾಡಿಕೊಂಡರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮರಗೋಡು ಗೌಡ ಸಮಾಜದ ಅಧ್ಯಕ್ಷರಾದ ಬೈಮನ ಪೊನ್ನಪ್ಪನವರು ಮಾತನಾಡಿ ಇಂದಿನ ಸಮಾರಂಭ ನಿಮ್ಮೆಲ್ಲರ ಸಹಕಾರದ ಫಲ, ಪ್ರೀತಿ, ವಿಶ್ವಾಸ, ಒಗ್ಗಟ್ಟುಗಳನ್ನು ಇನ್ನು ಮುಂದೆಯೂ ರೂಢಿಸಿಕೊಳ್ಳಬೇಕು, ನಮ್ಮ ಭಾಷೆ, ಸಂಸ್ಕೃತಿಗಳನ್ನೂ ಪ್ರೋತ್ಸಾಹಿಸಿ ಬೆಳೆಸುವ ವೇದಿಕೆಯೇ ಈ ಗೌಡ ಸಮಾಜ ಎಂದು ನುಡಿದರು.

ಸಮಾರಂಭಕ್ಕೆ ಮೊದಲು ಕುಮಾರಿ ಬಡುವಂಡ್ರ ಪ್ರಮೋದಿನಿ, ಸುನಂದಿನಿ ಸಹೋದರಿಯರು ಪ್ರಾರ್ಥಿಸಿದರೆ, ಪುಳಕಂಡ, [ಕುಟ್ಟನ] ಮುತ್ತಪ್ಪನವರು ಸ್ವಾಗತಿಸಿ ಕೈಲ್ ಮುಹೂರ್ತ ಬಗ್ಗೆ ವಿವರಿಸುತ್ತಾ, ಹಿಂದಿನ ಕಾಲದಲ್ಲಿ ನಮ್ಮ ಜನ ಗದ್ದೆ ಕೆಲಸಗಳನ್ನು ಮುಗಿಸಿದ ಬಳಿಕ ಅದಕ್ಕೆ ಉಪಯೋಗಿಸುತ್ತಿದ್ದ ಆಯುಧಗಳು ಹಾಗೂ ದನಕರುಗಳಿಗೆ ಪೂಜೆ

ಸಲ್ಲಿಸುವ ಕ್ರಮವಿತ್ತು. ಆದರೆ ಕ್ರಮೇಣ ಅದೆಲ್ಲಾ ಮರೆಯಾಗುತ್ತಿದೆ ಎಂದು ವಿಷಾದಿಸಿದರು. ಪ್ರಾಸ್ತವಿಕ ಭಾಷಣ ಮಾಡಿದ ಆ ಸಮಾಜದ ರೂವಾರಿ ಬಳಪದ ಸೋಮಣ್ಣನವರು ಜನ ಸಂಘಟನೆಯೇ ಈ ಕೈಲ್ ಮುಹೂರ್ತದ ಮೂಲೋದ್ದೇಶ, ಕಲ್ಯಾಣಮಂಟಪಗಳನ್ನು ಕಟ್ಟುವುದರಿಂದ ನಮ್ಮ ಜನಾಂಗ ಉದ್ಧಾರವಾಗದು. ಪ್ರತಿಭೆಗಳನ್ನು ಪ್ರೋತ್ಸಾಹಿಸುವತ್ತ ಸಮಾಜ ಮುನ್ನಡೆಯಬೇಕು. ಈ ಸಮಾಜ ಇನ್ನೂ ಬೆಳೆಯಲು ನಿಮ್ಮೆಲ್ಲರ ಸಹಕಾರ ಅತ್ಯಗತ್ಯ ಎಂದು ಕೋರಿದರು.

ಕಾರ್ಯದರ್ಶಿ ಜೈನೀರ ವೆಂಕಟೇಶ್‌ರವರು ವಂದನಾರ್ಪಣೆಯೊಂದಿಗೆ ಸಮಾರಂಭಕ್ಕೆ ಮಂಗಳ ಹಾಡಿದರು.

ಸಂಗಾತಿ ಕಂಡಂತೆ ಮರಗೋಡು ಕೈಲ್ ಮುಹೂರ್ತ : ಆಮಂತ್ರಣದ ಮೇರೆಗೆ "ಕೊಡಗು ಸಂಗಾತಿ" ಮರಗೋಡಿನ ಸಮಾರಂಭಕ್ಕೆ ಹೋದಾಗ ಅಲ್ಲಿ ಹಬ್ಬದ ವಾತಾವರಣ ಸ್ಪಷ್ಟವಾಗಿ ಮೂಡಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಕಂಡು ಬಂದ ವಾಹನಗಳು ಈ ಊರು ಆರ್ಥಿಕವಾಗಿ ಸುಸ್ಥಿತಿಯಲ್ಲಿದೆ ಎಂದು ಸಾರಿ ಹೇಳಿದವು. ನಿತ್ಯ ಹಸುರಿನ ಕಾಫಿಯ ಕಾನನದ ನಡುವೆ "ಗೌಡ ಸಮಾಜ" ಕಿರೀಟ ಪ್ರಾಯದಂತೆ ಶೋಭಿಸುತ್ತಿತ್ತು. ಭಾರದ ಗುಂಡು ಎಸೆತ, ಕಾಯಿಗೆ ಗುಂಡು ಹೊಡೆಯುವುದು ಮುಂತಾದ ಕ್ರೀಡೆಗಳು ಒಂದೆಡೆ ಭರದಿಂದ ಸಾಗುತ್ತಿದ್ದಂತೆ ಇತ್ತ ವೇದಿಕೆಯಲ್ಲಿ ಗೌಡ ಸಂಸ್ಕೃತಿ ಮೇಳೈಸುತ್ತಿತ್ತು. ಹೆಣ್ಣೊಳಿಸುವ ಶೋಭಾನೆ, ಮಧುರಂಗಿ ಹಿಡಿಸುವ ಶೋಭಾನೆ, ಬಣ್ಣ ಬಂಗಾರ ತರುವ ಶೋಭಾನೆಗಳು ಒಂದುಕ್ಷಣ ಮದುವೆಯ ರಂಗು ತಂದರೆ, ನಮ್ಮವರೇ ರಚಿಸಿ ಹಾಡುತ್ತಿದ್ದ ಅರೆಭಾಷೆಯ ಹಾಡುಗಳು, ನಮ್ಮ ಸಾಹಿತ್ಯ ಇಷ್ಟು ಮುಂದುವರಿದಿದೆಯಲ್ಲಾ ಎಂದು ಹೆಮ್ಮೆಪಡುವಂತಿತ್ತು. 'ಭೋಟಾ ಸೋನಾ' ಕಾರ್ಯಕ್ರಮ ಸಭಿಕರನ್ನೊಮ್ಮೆ ಮೂಕವಿಸ್ಮಿತರನ್ನಾಗಿಸಿದರೆ, ಭರತನಾಟ್ಯ ಮತ್ತು ಇನ್ನಿತರ ನೃತ್ಯಗಳು ನಮ್ಮನವ ಪೀಳಿಗೆಯ ನೈಜ ಕಲಾವಂತಿಕೆಯನ್ನು ಒರೆಗೆ ಹಚ್ಚಿದಂತಿತ್ತು. ಇಡೀ ಸಮಾರಂಭ **ಅರೆ ಭಾಷೆಯ ಹೊನಲಿನಲ್ಲಿ ತೇಲಾಡಿದರೆ,** ಕೊಡಗು ಗೌಡ ಸಂಪ್ರದಾಯದ ಉಡುಪುಗಳು ಅಲ್ಲಲ್ಲಿ ಓಲಾಡುತ್ತಿದ್ದವು. ನಮ್ಮ ಸಂಸ್ಕೃತಿ, ಭಾಷೆ, ಪರಂಪರೆ ಮಡಗಟ್ಟಿದ್ದ ಸಮಾರಂಭ ಕೊನೆಯವರೆಗೂ ಶಿಸ್ತು, ಸಂಯಮದಿಂದ ವರ್ತಿಸುತ್ತಿದ್ದುದು, ನೆರೆದ ಗಣ್ಯರಿಗೆ ಸಂತಸ ತಂದಿತ್ತು. ಕೊಡಗಿನ ಸಾಂಪ್ರದಾಯಿಕ ವಾಲಗವು ಗೌರವದಿಂದ ಮನೆಗೆ ಹಿಂತಿರುಗುತ್ತಿದ್ದ ಬಾಂಧವರಿಗೆ ಶುಭ ಹಾರೈಸಿತು.

ಮರಗೋಡಿನ ಗೌಡ ಸಮಾಜ

ಮರಗೋಡಿನಲ್ಲಿ ಶೇ. 90 ರಷ್ಟು ಮಂದಿ ಗೌಡ ಜನಾಂಗದವರೇ ಆಗಿದ್ದು, ಇವರಲ್ಲಿ ಶೇ. 80 ರಷ್ಟು ಮಂದಿ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವುದರಿಂದ, ಅಲ್ಲಿ ನಮ್ಮವರದೇ ಆದ ಸಮಾಜವನ್ನು ಸ್ಥಾಪಿಸುವ ಉದ್ದೇಶದಿಂದ 1992 ರಲ್ಲಿ ಕೆಲವು ಮಂದಿ ಒಟ್ಟು ಸೇರಿ ಚರ್ಚಿಸಿದರು. ಅದರ ಫಲವೇ ಒಂದು ವರ್ಷದಲ್ಲಿ ನಿರ್ಮಿತಗೊಂಡಿರುವ ಎರಡು ಕೊಠಡಿಗಳನ್ನು ಹೊಂದಿರುವ 'ಮರಗೋಡು ಗೌಡ ಸಮಾಜ',

ಮರಗೋಡು, ಕಟ್ಟೆಮಾಡು, ಐಕೊಳ,ಹೊಸ್ಕೇರಿ ಈ ಗ್ರಾಮದಲ್ಲಿ ಸುಮಾರು 400 ಗೌಡ ಕುಟುಂಬಗಳನ್ನು ಹೊಂದಿದ್ದು ಆ ಊರಿನಲ್ಲಿ ಉತ್ತಮ ಪ್ರತಿಕ್ರಿಯೆ ಕಂಡು ಬರುತ್ತಿದೆ. ಆ ಸಮಾಜಕ್ಕೆ ಉಳುವಾರ ಗೋಪಾಲರವರು 10 ಸೆಂಟ್ ಮತ್ತು ಬಡವಂಡ್ರ ಕೆ. ರಾಘವಯ್ಯರಾಣಿಯವರು 10 ಸೆಂಟ್ ಜಾಗವನ್ನು ಉದಾರವಾಗಿ ನೀಡಿದರೆ, ಬಡುವಂಡ್ರ ಕೆ. ಪೂವಯ್ಯ ಬೋಜಮ್ಮನವರು ಬಾವಿ ತೋಡಿಸಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ ಎಂದು ಆ ಸಮಾಜದ ಕಾರ್ಯದರ್ಶಿ ಜೈನಿರ ವೆಂಕಟೇಶ್ ಮಾಹಿತಿ ನೀಡಿದರು. ಇಂತಹ ದಾನಿಗಳು ಮುಂದೆ ಬಂದಾಗ ಜನಾಂಗ ಏಳಿಗೆಯಾಗುವುದರಲ್ಲಿ ಎಳ್ಳಷ್ಟು ಸಂಶಯ ವಿರಲಾರದು.

● **ಸಂಗಾತಿ ವರದಿ**

ಅಂತರ

ನಾನು ಬಡವ ನೀನು ಬಲ್ಲಿದ
ಎಂಬ ಭೇದವೇಕೆ ?
ನಮ್ಮ ನಮ್ಮಲ್ಲಿ ಹರಿಯುವ ರಕ್ತ
ಒಂದೇ ಅಲ್ಲವೆ ?
ನೀನು ಹೋಗುವೆ ನಿನ್ನದೇ ಕಾರಲ್ಲಿ
ನಾನು ಹೋಗುವೆ ಕೆಂಪು ಬಸ್ಸಲ್ಲಿ
ನೀನು ಉಣ್ಣುವೆ ಮೃಷ್ಟಾನ್ನ ಭೋಜನ
ನಾನು ಉಣ್ಣುವೆ ತಿಳಿಗಂಜಿಯ
ನೀನು ವಾಸಿಸುವೆ ಅರಮನೆಯಲ್ಲಿ
ನಾನು ವಾಸಿಸುವೆ ಗುಡಿಸಲಲ್ಲಿ
ಆದರೂ ನಮ್ಮ ನಮ್ಮಲ್ಲಿ ಭೇದವೇತಕ್ಕೆ
ಇದುವೆ ನನ್ನ ನಿನ್ನ ಅಂತರ.

● **ಎಂ. ಜಿ. ಹರಿಣಿ ಗೋಪಾಲ್,** ಬೆಂಗಳೂರು.

ಕುಂಭಗೌಡನ ಮನೆಸ್ಥಾನದ ಚರಿತ್ರೆ

ಕುಂಭಗೌಡನ ರಂಜಿತ್
ಮಕ್ಕಂದೂರು

ಮೂಲ :

ಈ ಕುಟುಂಬದ ಪೂರ್ವಜರು ಹಾಸನ ಜಿಲ್ಲೆಯ ಹೇಮಾವತಿ ನದಿಯ ದಡದಲ್ಲಿರುವ ಹರಿಹಳ್ಳಿ ಎಂಬ ಗ್ರಾಮಸ್ಥರಾಗಿದ್ದರು. ಇವರಿಗೆ ಹೇಮಾವತಿ ನದಿಯ ದಡದಲ್ಲಿ ಫಲವತ್ತಾದ ಭೂಮಿ ಧಾರಾಳವಾಗಿತ್ತು. ಈಗಲೂ ಅವರ ಸಂತತಿ ಅಲ್ಲಿ ವಾಸಿಸುತ್ತಿದ್ದಾರೆ. ಹಿಂದೆ ಮೂವರು ಅಣ್ಣ ತಮ್ಮಂದಿರು ಇಲ್ಲಿ ವಾಸಿಸುತ್ತಿದ್ದರೆಂದೂ, ಹಿಂದಿನ ಕಾಲದಲ್ಲಿ ಯಥೇಚ್ಛವಾಗಿ ಮಳೆ ಬರುತ್ತಿದ್ದುದರಿಂದ ಹೇಮಾವತಿ ನದಿಯು ಸತತವಾಗಿ 7 ವರ್ಷ ನೆರೆ ಬಂದುದರಿಂದ ಬೆಳೆಯಾಗದೆ ಈ ಸ್ಥಳವನ್ನು ಬಿಡಬೇಕಾಗಿ ಬಂತೆಂದು ಹೇಳುವರು. ಮೂವರಲ್ಲಿ ಹಿರಿಯರಿಬ್ಬರು ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ಹೋದರೆಂದು ತಿಳಿದುಬರುತ್ತದೆ. ಹಿರಿಯನು ಅಲ್ಲಿಯೇ ನೆಲೆನಿಂತನೆಂದು ಹೇಳುತ್ತಾರೆ.

ಇನ್ನೊಂದು ಹೇಳಿಕೆಯ ಪ್ರಕಾರ ಮೈಸೂರಿನಲ್ಲಿ ಪೂರ್ಣಯ್ಯನವರು ದಿವಾನರಾಗಿದ್ದಂತಹ ಕಾಲದಲ್ಲಿ ಇಲ್ಲಿಯ ಭೂಮಿಯನ್ನೆಲ್ಲಾ ಬ್ರಾಹ್ಮಣರಿಗೆ ಉಂಬಳಿಯಾಗಿ ಕೊಟ್ಟದ್ದರಿಂದ ನಿರಾಶೆ ಹೊಂದಿದ ಈ ಕುಟುಂಬಸ್ತರ ಪೂರ್ವಜರು ಹರಿ ಹಳ್ಳಿಯನ್ನು ಬಿಟ್ಟು ದಕ್ಷಿಣ ಕನ್ನಡ ಜಿಲ್ಲೆಗೆ ಹೋದರೆಂದು ಹೇಳುತ್ತಾರೆ. ಹಿರಿಯನಾದವನನ್ನು ಅಲ್ಲಿಯ ಬ್ರಾಹ್ಮಣರು ಒತ್ತಾಯಪಡಿಸಿ ನಿಲ್ಲಿಸಿಕೊಂಡರೆಂದು ತಿಳಿದು ಬರುತ್ತದೆ. ಇವರು ಇಲ್ಲಿಯ ಜಮೀನುಗಳನ್ನು ರೂಢಿಪಡಿಸುತ್ತಾ ಇವರ ಕುಲದೇವತೆಯಾದ 'ಹೊಸಕೋಟೆ ಕೆಂಚಮ್ಮ' ದೇವರನ್ನು ಪೂಜಿಸುತ್ತಾ ಅಲ್ಲಿಯೇ ನೆಲೆನಿಂತರು. ಇವರು ಈ ದೇವತೆಗೆ ಮುಖ್ಯಸ್ಥರೆಂದು ಹೇಳಲಾಗಿದೆ. ಇಂದಿಗೂ ಅಲ್ಲಿಯ ಬ್ರಾಹ್ಮಣರು ಈ ದೇವತೆಯನ್ನು ವಾರಕ್ಕೆ ಮೂರು ಬಾರಿ ಅಂದರೆ ಆದಿತ್ಯವಾರ, ಬುಧುವಾರ ಮತ್ತು ಶುಕ್ರವಾರ ಪೂಜಿಸುತ್ತಾರೆ. ಹತ್ತಿರದ ಕೆರೆಯಲ್ಲಿ ಸ್ನಾನ ಮುಗಿಸಿ ದೇವರ ಉಡಿಗೆಯನ್ನು ಶುಭ್ರಗೊಳಿಸಿ ಅಲಂಕರಿಸಿ ಪೂಜೆ ನಡೆಯುತ್ತದೆ. ಅನೇಕರು ದೇವತೆಯ ದರ್ಶನಕ್ಕೆಂದು ಬರುವರು. ಪ್ರತಿವರ್ಷವೂ ಇಲ್ಲಿ ದೊಡ್ಡ ಜಾತ್ರೆಯು ನಡೆಯುತ್ತದೆ.

ಹೀಗೆ ಹೊರಟ ಕಿರಿಯ ತಮ್ಮಂದಿರು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಸುಬ್ರಮಣ್ಯದಲ್ಲಿ ನೆಲೆನಿಂತರು. ಈಗಲೂ ಇವರ ಸಂತತಿಯವರಿದ್ದಾರೆ. ಈ ಕುಟುಂಬಸ್ತರನ್ನು 'ಕೂಜುಗೋಡು' ಎಂದು ಕರೆಯುವರು. ಇವರ ಕುಲದೇವತೆಯು ಕೂಡ ಕೋಟೆ ಕೆಂಚಮ್ಮ ದೇವತೆಯಾಗಿದ್ದಾಳೆ. ಈ ಕುಟುಂಬಸ್ತರಿಗೆ ಆದಿಯಲ್ಲಿ ತಮ್ಮ ಮೂಲಸ್ಥಾನವನ್ನು ಬಿಟ್ಟುಹೋದುದಕ್ಕೋಸ್ಕರ ಅನೇಕ ವಿಧದಲ್ಲಿ ಬಾಧೆಯನ್ನು ಕೊಟ್ಟುದಾಗಿಯೂ ಆದ್ದರಿಂದ ಆ ದೇವತೆಯ ವಿಗ್ರಹವನ್ನು ಮೂಲಸ್ಥಾನದಿಂದ ತೆಗೆದುಕೊಂಡು ಹೋಗಿ ಸ್ಥಾನ ಕೊಟ್ಟು ಪೂಜಿಸುವುದಕ್ಕೆ ತೊಡಗಿದ ನಂತರ ಸಕಲ ಬಾಧೆಯೂ ಪರಿಹಾರವಾಯಿತೆಂದು ಹೇಳಿಕೆ ಇದೆ. ಹೇಗೊ ಇವರು ಮೂಲ ಸ್ಥಾನದಿಂದ ತಮ್ಮ ಕುಲದೇವತೆಯನ್ನು ತೆಗೆದುಕೊಂಡು ಹೋಗಿ ಪೂಜಿಸಲು ತೊಡಗಿದರು.

ಸುಮಾರು 17ನೆಯ ಶತಮಾನದಲ್ಲಿ ಕಾರಣಾಂತರದಿಂದ 'ಕೂಜುಗೋಡು' ಕುಟುಂಬಸ್ತರಲ್ಲಿ ಒಬ್ಬರಾದ ಕುಂಭಪ್ಪ ಎಂಬುವರು ತನ್ನ ಪರಿವಾರ ಸಮೇತ ಕೊಡಗಿನ ಕಡೆಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಹೊರಟರು. ಇವರು ಯಾವ ಮಾರ್ಗವಾಗಿ ಬಂದರೆಂಬುದು ಚರ್ಚಾಸ್ಪದ ವಿಚಾರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಾದ ಸುಬ್ರಹ್ಮಣ್ಯದಿಂದ ದಕ್ಷಿಣದ ಕಡೆಗೆ ಬರುವಾಗ ಮಕ್ಕಂದೂರು ಗ್ರಾಮದ 'ಉಮೆಟ್ಟ' (ಈಗಿನ ಕಾಳಮ್ಮ ದೇವಸ್ಥಾನ) ಎಂಬ ಒಂದು ಎತ್ತರವಾದ ಸ್ಥಳದಲ್ಲಿ ನೀರಡಿಕೆ ಹೋಗಲಾಡಿಸಿ ವಿಶ್ರಮಿಸುತ್ತಿದ್ದಾಗ ಒಂದು 'ಬೆಳ್ಳಕ್ಕಿ' (ಪೊಲಕೆ) ಆ ಕಡೆಯಿಂದ ಪಶ್ಚಿಮದ ಕಡೆಗೆ ಹಾರಿತು. ಆಗ ಕುಂಭಪ್ಪನು ಈ ಬೆಳ್ಳಕ್ಕಿ ಯಾವ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳುತ್ತದೋ ಅಲ್ಲಿ ತನ್ನ ನೆಲೆಯನ್ನು ಊರುವುದಾಗಿ ತೀರ್ಮಾನಿಸಿ, ಆ ಹಕ್ಕಿ ಹಾರುವುದನ್ನೇ ಗಮನಿಸಿದರು. ಅಂದರೆ ಬೆಳ್ಳಕ್ಕಿಯು ನೀರಿನ ಆಸರೆ ಯಥೇಚ್ಛವಾಗಿರುವ ಕಡೆ ರಾತ್ರಿ ತಂಗುವುದು ವಾಡಿಕೆ. ನಂತರ ಆ ಹಕ್ಕಿಯು ಕುಳಿತ ಸ್ಥಳವನ್ನು ಚೆನ್ನಾಗಿ ಗಮನಿಸಿ ಆ ಕಡೆಗೆ ತಮ್ಮ ಪ್ರಯಾಣವನ್ನು ಬೆಳೆಸಿ, ಆ ಪ್ರದೇಶವನ್ನು ಆಕ್ರಮಿಸಿ ತಮ್ಮದಾಗಿ ಮಾಡಿಕೊಂಡರು. ಈತನು ತನ್ನ ಹೆಂಡತಿ ಮತ್ತು ಪರಿವಾರದವರು ಬಂದಾಗ ಈ ಪ್ರದೇಶವು ಕಾಡು ಮತ್ತು ಮುಡೆಂಗಿ ಎಂಬ ಒಂದು ಜಾತಿಯ ಮುಳ್ಳುಗಳಿಂದ ಕೂಡಿದ ಉದ್ದನೆಯ ಎಲೆಗಳನ್ನು ಹೊಂದಿದ್ದ ಗಿಡದಿಂದ ತುಂಬಿತ್ತು. ಮೊಟ್ಟ ಮೊದಲು ಈತನು ಕುಡಿಯಲು ಯೋಗ್ಯವಾದ ನೀರನ್ನು ಪರಿಶೋಧಿಸಬೇಕಾಯಿತು. ಆದ್ದರಿಂದ ಪಕ್ಕದಲ್ಲೇ ಸುಮಾರು 1/4 ಕಿಲೋಮೀಟರ್ ದೂರದಲ್ಲಿ ನೀರಿನ ಆಸರೆಯು ದೊರೆತುದರಿಂದ ಅಲ್ಲಿಯೇ ಒಂದು ಕೆರೆಯನ್ನು ಚಿಕ್ಕದಾಗಿ

ತೋಡಲಾಯಿತು. ಈ ಕೆರೆಯಿಂದ ಚಿಕ್ಕದಾದ ಚರಂಡಿಯ ರೂಪದ [ನೀರುಸಾಲು] ಕಾಲುವೆಯನ್ನು ತೆಗೆದು ಮನೆಯ ಮುಂದೆ ನೀರು ಬೀಳುವಂತೆ ಮಾಡಲಾಯಿತು. ಈ ನೀರು ಈ ಕುಟುಂಬಸ್ತರಿಗೆ [ಅಂದರೆ ಕುಂಭಪ್ಪನ ಸಂತತಿಯವರಾದುದರಿಂದ 'ಕುಂಭಗೌಡನ'] ಅತೀ ಪವಿತ್ರವಾದುದಾಗಿದೆ. ಇಲ್ಲಿಯ ನೀರು ಸದಾ ಹರಿದು ಬಂದು ಬೀಳುತ್ತಿರುತ್ತದೆ. ಈಗಲೂ ಕೂಡ ಬೆಳಿಗ್ಗೆ ಕೋಳಿ ಕೂಗುವ ಜಾವದಲ್ಲೆದ್ದು ಕುಲದೇವತೆಯಾದ ಕೆಂಚಮ್ಮ ದೇವತೆಗೆ ಮೂರು ಚಿಕ್ಕದಾದ ತಂಬಿಗೆ [ಮಿಳ್ಳೆಗಳು] ತಾಮ್ರ, ಹಿತ್ತಾಳೆ ಮತ್ತು ಕಂಚು ಲೋಹಗಳಿಂದ ಮಾಡಲಾದ ಮಿಳ್ಳೆಗಳಲ್ಲಿ ತಿಳಿಯಾದ ನೀರನ್ನು ತಂದಿಟ್ಟು ದೇವರ ಪೂಜೆ ಮಾಡುವ ನಿಯಮವಿದೆ. ನಮ್ಮ ಕುಟುಂಬಸ್ತರಿಗೆ ಅಬ್ಬಿ ನೀರೆಂದರೆ ಪವಿತ್ರವಾದುದು. ಈಗಲೂ ಸ್ವಂತ ನೆಂಟರಿಷ್ಟರು ಮನೆಗೆ ಬಂದಾಗ ಮೊದಲು ಅಬ್ಬಿಯಲ್ಲಿ ಕೈಕಾಲು ತೊಳೆದು ಕುಲದೇವತೆಗೆ ನಮಸ್ಕರಿಸುವರು.

ಈ ಕುಟುಂಬದ ಪೂರ್ವಜನಾದ ಕುಂಭಪ್ಪನು ಸುರುವಿಗೆ ಬಂದು ನೆಲೆನಿಂತಾಗ ಇಲ್ಲಿ ಮನೆಯನ್ನು ನಿರ್ಮಿಸಲು ಸುಲಭದಲ್ಲಿ ದೊರೆಯುತ್ತಿದ್ದ ವಸ್ತುಗಳೆಂದರೆ, ನೆರವಾದ ಚಿಕ್ಕ ಮರಗಳು [ಗಳುಗಳು] ಮರದ ಕಂಬಗಳು, ಪಕ್ಕದಲ್ಲೇ ಹರಿಯುವ ಅಭಿಧಾರೆ ಹೊಳೆಯ ಬದಿಗಳಲ್ಲಿ ಯಥೇಚ್ಛವಾಗಿ ಬೆಳೆದಿರುವ ಓಟೆ,ಕಾಡಿನಲ್ಲಿ ಬೆಳೆಯುತ್ತಿದ್ದ ಬೆತ್ತ ಮತ್ತು ಹಾಲುಬಳ್ಳಿ ಮುಂತಾದವುಗಳು. ಸುರುವಿಗೆ ಈ ವಸ್ತುಗಳಿಂದ ಒಂದು ನೆರಿಕೆಯ ಮನೆಯನ್ನು ಕಟ್ಟಿಕೊಂಡು ಅವರಲ್ಲಿ ವಾಸವಿದ್ದರು. ತಮ್ಮ ಮನೆಯ ಬಲಭಾಗದಲ್ಲಿ ಒಂದು ಕೊಲ್ಲಿಯು ಹರಿದು ಬರುತ್ತಿರುವುದರಿಂದ ಹಾಗೂ ಧಾರಾಳ ನೀರು ದೊರೆಯುತ್ತಿದ್ದುದರಿಂದ ಈ ಭಾಗದಲ್ಲಿ ಗದ್ದೆಗಳನ್ನು ಕಡಿದು ನಿರ್ಮಿಸಲು ತೊಡಗಿದರು. ಈ ಗದ್ದೆಗಳಲ್ಲಿ ಬತ್ತದ ಬೆಳೆಯನ್ನು ಬೆಳೆಸಿ ವ್ಯವಸಾಯ ಮಾಡತೊಡಗಿದರು.

ಮೊಟ್ಟಮೊದಲು ಮಾಡಿದ ಈ ಭೂಮಿಗೆ 'ದೇವರ ಭೂಮಿ'(ಮನೆ ಹತ್ತಿರದ ಗದ್ದೆ) ಎಂದು ಹೆಸರು ಬಂದಿದೆ. ಆ ನಂತರ ಸುತ್ತ ಮುತ್ತಲಿನ ಪ್ರದೇಶಗಳಲ್ಲಿನ ಕಾಡು ಕಡಿದು ಭತ್ತದ ಗದ್ದೆಗಳನ್ನಾಗಿ ನಿರ್ಮಿಸಿದರು.

ಮೊದಲಿಗೆ ಇವರು ತಮ್ಮ ಜೀವನೋಪಾಯಕ್ಕಾಗಿ ವ್ಯವಸಾಯವನ್ನು ಕೈಗೊಳ್ಳಬೇಕಾಯಿತು. ಆದ್ದರಿಂದ ತಮ್ಮ ಮನೆಗೆ ಹತ್ತಿರದಲ್ಲೇ ಸ್ವಲ್ಪ ಭತ್ತ ಬೆಳೆಯಬಹುದಾದ ಗದ್ದೆಗಳನ್ನು ನಿರ್ಮಿಸಿದರು. ಈ ಗದ್ದೆಗಳಿಗೆ ಮನೆಯ ಎರಡೂ ಬದಿಗಳಲ್ಲಿ ಸುಮಾರು 1 ಕಿಲೋ ಮೀಟರ್ ದೂರದಲ್ಲಿ ಹರಿದುಬರುವ ಕೊಲ್ಲಿಗಳಿಂದ ನೀರು ದೊರೆಯುವಂತಾಯಿತು. ಈ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡಲು ಪ್ರಾರಂಭಿಸಿದರು. ಆಗಿನ ಕಾಲದಲ್ಲಿ ಯಥೇಚ್ಛವಾದ ಮಳೆ ಬೀಳುತ್ತಿದ್ದುದರಿಂದ ಹಾಗೂ ಪಕ್ಕದಲ್ಲೇ ಹರಿಯುತ್ತಿರುವ ಹೊಳೆಯಲ್ಲಿ ನೀರು ಉಕ್ಕಿಬರುವ ಸಂಭವ ಹೆಚ್ಚಿದ್ದರಿಂದ ಸಾಮಾನ್ಯವಾಗಿ ಹೊಳೆಯಿಂದ ಹೆಚ್ಚು ಎತ್ತರದ ಪಶ್ಚಿಮ ಘಟ್ಟದಲ್ಲಿ ಭತ್ತದ ಗದ್ದೆಯನ್ನು ನಿರ್ಮಿಸಿದರು. ಕ್ರಮೇಣ ಹೊಳೆಯ ದಡದ ಸಮೀಪದವರೆಗೂ ಭತ್ತದ ಗದ್ದೆಗಳನ್ನು ನಿರ್ಮಿಸಿದರು. ಮನೆಯ ಎಡಬದಿಯ ಸಮೀಪದ ಕೊಲ್ಲಿಯ ಬದಿಯ ಗದ್ದೆಗಳಲ್ಲಿ ಕಬ್ಬನ್ನು ಬೆಳೆಯುತ್ತಿದ್ದರು. ಆದುದರಿಂದ ಈ ಸ್ಥಳದ ಗದ್ದೆಗಳಿಗೆ ಈಗಲೂ ಸಹ'ಕಬ್ಬಿನ ಹಿತ್ತಲು' ಎಂಬ ಹೆಸರು ಇದೆ.

ಐನ್ ಮನೆ (ದೊಡ್ಡ ಮನೆ)

ತಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದ ನಂತರ ಹಾಗೂ ಕುಟುಂಬದ ಜನಸಂಖ್ಯೆ ಹೆಚ್ಚಿದಾಗ ಒಂದು ದೊಡ್ಡದಾದ ಮನೆ ಅವಶ್ಯಕವೆಂದು ಕಂಡು ಬಂತು. ಎಲ್ಲರೂ ಒಂದೇ ಅಡಿಗೆಯಲ್ಲಿ ಜೀವಿಸುತ್ತಿದ್ದರು. ಎಲ್ಲರೂ ಒಟ್ಟು ಸೇರಿ ಹಾಗೂ ನೆರೆ ಕುಟುಂಬಸ್ತರ ಸಹಾಯ ಪಡೆದು ದೊಡ್ಡದಾದ ನಾಲ್ಕುಕಟ್ಟಿನ ಮನೆಯನ್ನು ಕಟ್ಟಿದರು. ಈ ಮನೆಯಲ್ಲಿ ಅನೇಕ ಕೋಣೆಗಳಿವೆ.

ಬಲ್ಲೂರಮ್ಮನ ಕಥೆ :

ಕುಂಭಗೌಡನ ಕುಟುಂಬ ಸತ್ಯ, ಶಾಂತಿಗೆ, ದಾನ ಧರ್ಮಕ್ಕೆ ಹೆಸರಾಗಿತ್ತು. ಇವನ್ನು ಪರೀಕ್ಷೆ ಮಾಡಲೆಂದು ಬಲ್ಲೂರಮ್ಮನೆಂಬ ದೇವ ಮಹಿಳೆಯು ಕುಂಭಗೌಡನ ಕುಟುಂಬದ ಐನ್ ಮನೆಗೆ ಬರುವಳು. ತನ್ನ ದೈವೀ ಶಕ್ತಿಯಿಂದ ಎಲ್ಲವನ್ನೂ ಕಲ್ಪಿಸಿಕೊಳ್ಳಬಲ್ಲವಳಾಗಿದ್ದ ಬಲ್ಲೂರಮ್ಮ ವಿಚಿತ್ರ ರೀತಿಯ ರೋಮಾಂಚನಕ್ಕೊಳಪಡುವಳು. ದಿವ್ಯ ತೇಜಸ್ವಿಯಾದ ಕೆಂಚಮ್ಮಳ [ಕುಲದೇವತೆಯ] ದರ್ಶನವಾಗಿ ಇಂತಹ ಒಂದು ಮಹಾ ಮನೆಗೆ ಪರೀಕ್ಷೆ ಮಾಡುವ ದೃಷಿಯಿಂದ ಬಂದುದು ನನ್ನ ತಪ್ಪಾಯಿತೆಂದುಕೊಂಡು ಹಿಂತಿರುಗಿ ಹೊರಡಲನುವಾದಳು. ಆಗ ಕುಲದೇವತೆಯಾದ ಕೆಂಚಮ್ಮಳು ಬಲ್ಲೂರಮ್ಮಳನ್ನು ತಡೆದು ನೀನು ನನ್ನ ಸಹೋದರಿ, ಇಲ್ಲೇ ನಿಲ್ಲಬೇಕೆಂದು ಹೇಳಿ ನಿನಗೆ ಅಗ್ರಪೂಜೆ ಸಲ್ಲಿಸಲಾಗುವುದೆಂದು ಅವಳನ್ನು ಇಲ್ಲಿಯೇ ಉಳಿಸಿಕೊಳ್ಳುವಳು. ಈಗಲೂ ದೇವರ ಕೋಣೆಯ ಹೊರಬದಿಯಲ್ಲಿ ಬಲ್ಲೂರಮ್ಮನಿಗೆ ಅಗ್ರಪೂಜೆ ಸಲ್ಲಿಸಿ ನಂತರದಲ್ಲಿ ಕೆಂಚಮ್ಮ ತಾಯಿಯನ್ನು ಪೂಜಿಸಲಾಗುತ್ತದೆ. ●

ಟೀಕೆ–ಟಿಪ್ಪಣಿ

ಮತದಾರರ ಗುರುತಿನ ಚೀಟಿಗಳು ಕಸದ ತೊಟ್ಟಿಯಲ್ಲಿ !

ಪ್ರಜಾಪ್ರಭುತ್ವ ಭರತಖಂಡದ ಪೌರತ್ವದ ಹೆಗ್ಗುರುತಾಗಿ ಪ್ರಜೆಗಳ ಕೈಸೇರ ಬೇಕಾಗಿರುವ ಮತದಾರರ ಗುರುತಿನ ಚೀಟಿಗಳು ಕಸದ ತೊಟ್ಟಿಯನ್ನು ಸೇರಲು ಸಾಧ್ಯವೆ ? ಸಾಧ್ಯ, ಎಂದು ಹೇಳುತ್ತಾರೆ. ಭ್ರಷ್ಟಾಚಾರದಲ್ಲಿ ಭಾರತವನ್ನು ಅಗ್ರಸ್ಥಾನ ಕ್ಕೇರಿಸಲು ಶ್ರಮಿಸುತ್ತಿರುವ ಸರಕಾರದ ಸಭ್ಯ ಅಧಿಕಾರಿಗಳು. ಅದರ ಫಲವಾಗಿ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ 60 ರಷ್ಟು ಹೆಚ್ಚು ಮತದಾರರ ಚೀಟಿಗಳು ಪಡುವಾರಹಳ್ಳಿಯ ಕಸದ ತೊಟ್ಟಿ ಸೇರುವಂತಾಗಿ, ಆಡುವ ಮಕ್ಕಳಿಗೆ ಪುಕ್ಕಟೆ ಆಟಿಕೆ ಸಿಕ್ಕಿದಂತಾದಾಗ ಅವು 'ಸಂಗಾತಿ' ಕಣ್ಣಿಗೆಬಿತ್ತು. ಪ್ರಜೆಗಳಿಗೆ ಅಮೂಲಾಗ್ರವಾಗಿ ದೊರೆಯಬೇಕಾಗಿದ್ದ ಮತದಾರರ ಚೀಟಿಗಳಿಗೆ ಇಂಥ ಗತಿಯಾದರೆ, ಇನ್ನು ಸರಕಾರ ಪ್ರಕಟಿಸುವ ಯೋಜನೆಗಳು ಜನಸಾಮಾನ್ಯರನ್ನು ಎಷ್ಟರ ಮಟ್ಟಿಗೆ ತಲುಪುವುದು ಎಂಬುದಕ್ಕೆ ಈ ಘಟನೆ ದರ್ಪಣ ಹಿಡಿದಂತಿದೆ. ಮತದಾರರ ಚೀಟಿಗಳೇ ಕಸದ ತೊಟ್ಟಿ ಸೇರಿರುವಾಗ, ಸರಕಾರದ ಸವಲತ್ತುಗಳು ಅಧಿಕಾರಿಗಳ ಜೇಬು ಸೇರಿದರೆ ಇನ್ನು ಮುಂದೆ ಕಸಿವಿಸಿ ಮಾಡುವ ಅಗತ್ಯವಿಲ್ಲ. ಚುನಾವಣಾ ಸುಧಾರಣೆಗಾಗಿ ಟಿ. ಎನ್. ಶೇಷನ್ನರು ಮಾಡಿದ ತತ್ವಗಳನ್ನು ಗಾಳಿಗೆ ತೂರುತ್ತಿದ್ದೇವೆ ಎಂಬುದರ ಸಂಕೇತವಾಗಿ, ತೂರಿದ ಗುರುತಿನ ಚೀಟಿಗಳು ಕಸದ ತೊಟ್ಟಿಯಲ್ಲಿ ಬಂದು ಬಿದ್ದವೇ ? ಅಥವಾ ಮತದಾರರಿಗೆ ಹಂಚುವ ಭರಾಟೆಯಲ್ಲಿ ಕಸದ ತೊಟ್ಟಿಯನ್ನೇ ಮತದಾರರೆಂದು ಅಧಿಕಾರಿಗಳು ಭಾವಿಸಿದರೇ ? ಅಥವಾ ಮತದಾರರೇ ಚುನಾವಣೆ ಬಗ್ಗೆ ರೋಸಿ ಗುರುತಿನ ಚೀಟಿಗಳನ್ನು ಕಸದ ಬುಟ್ಟಿ ಸೇರಿಸಿದರೇ ? ಎಂಬುದನ್ನು ತಿಳಿಯ ಬೇಕಾಗಿದೆ. ಸಂಬಂಧಪಟ್ಟವರು ತಕ್ಷಣ ಕ್ರಮ ತೆಗೆದುಕೊಂಡು ಘಟನೆಯ ಪುನರಾವರ್ತನೆಗೆ ಎಡೆಕೊಡದಿದ್ದರೆ ಸಾಕಷ್ಟೆ.

–: ನಗೆ ಹನಿಗಳು :–

ಹೆಂಡತಿ—ರೀ ನೀವು ಕಾಫಿ ಕುಡಿಯುವುದನ್ನು ನಿಲ್ಲಿಸಿದರೆ ಕಾಶಿಗೆ ಹೋಗಿ ಬರುವಷ್ಟು ಹಣ ಉಳಿತಾಯ ಆಗುತ್ತೆ.

ಗಂಡ—ಅದಕ್ಕೇನು, ಊಟ ಬಿಟ್ಟರೆ ಕೈಲಾಸಕ್ಕೆ ನೇರ ಹೋಗಬಹುದಲ್ಲ.

O O O

ನ್ಯಾಯಾಧೀಶ—ನಿನ್ನ ಗಂಡ ಕೆನ್ನೆ ಊದುವ ಹಾಗೆ ಹೊಡೆದ ಅಂತೀಯಲ್ಲಾ, ಅವನ ಎರಡು ಕೈ ಮುರಿದಿದೆಯಲ್ಲಾ ಇದು ಹೇಗೆ ಸಾಧ್ಯ ?

ಅವಳು—ಕಪಾಳಕ್ಕೆ ಹೊಡೆಯೋದಕ್ಕೆ ಮೊದಲು ಅವರ ಕೈ ಮುರಿದಿರಲಿಲ್ಲ ಸ್ವಾಮಿ.

O O O

ಒಬ್ಬ ರೀ ನಮ್ಮ ಮನೇಲಿ ಊಟದ ಮೇಲೆ ನೊಣ ಕುಳಿತುಕೊಳ್ಳುತ್ತೆ. ಅದರಿಂದ ಸಾಂಕ್ರಾಮಿಕ ರೋಗ ಬರುತ್ತೆ ಏನು ಮಾಡೋದ್ರಿ.

ಇನ್ನೊಬ್ಬ—ರೀ ಊಟಕ್ಕೆ ಡಿ.ಡಿ.ಟಿ. ಸಿಂಪಡಿಸಿದರೆ ನೊಣ ಸಾಯುತ್ತೆ.

ನಂಗಾರು ಭಾರತಿ (ಚಿತ್ರ) ತಿಮ್ಮಯ್ಯ, ಸೋಮವಾರಪೇಟೆ

ಈ ಮೂವರನ್ನು ಮರೆಯಬೇಡಿ

1 ಈ ಮೂವರನ್ನು ಆದರದಿಂದ ಕಾಣು
– ತಾಯಿ, ತಂದೆ, ಗುರು.

2 ಈ ಮೂರರನ್ನು ಎಂದಿಗೂ ಮರೆಯಬೇಡ
– ಸತ್ಯ, ಶಾಂತಿ, ಅಹಿಂಸೆ.

3 ಈ ಮೂರರನ್ನು ನಿಯಮದಿಂದ ಮಾಡು
– ಭಜನೆ, ಭೋಜನ, ವ್ಯಾಯಾಮ.

4 ಈ ಮೂರಕ್ಕೆ ಅಂಜುತ್ತಿರು
– ಸುಳ್ಳು, ನಿಂದೆ, ಕಳ್ಳತನ.

5 ಈ ಮೂರು ನಿನ್ನ ವಶದಲ್ಲಿರಲಿ
– ಇಂದ್ರಿಯ, ಮನಸ್ಸು, ಕ್ರೋಧ.

6 ಈ ಮೂವರಿಗೆ ಚೇಷ್ಟೆ ಮಾಡದಿರು
– ಹುಚ್ಚ, ಮುದುಕ, ಮೂರ್ಖ,

O ಜೀವನದ ಯಶಸ್ಸು ಅಡಗಿರುವುದು ಮುತ್ತಿನಂತ ಮೂರು ಅಕ್ಷರಗಳಲ್ಲಿ ಅದುವೇ **"ಪ್ರಯತ್ನ"**

● ನಂಗಾರು ಟಿ. ಹೇಮಂತ, ಸೋಮವಾರಪೇಟೆ

ಏನೆಂದು ಬರೆಯಲಿ ಮನದಾಸೆಯ ?

ಯಾವುದನ್ನು ಬರೆಯಲಿ
ಯಾವುದನ್ನು ಬಿಡಲಿ

ಕೋಟ್ಯಾಂತರ ಜನರ ಲಕ್ಷಾಂತರ ಕಷ್ಟ
ಸಂಕಷ್ಟಗಳ ಬಗ್ಗೆ ಬರೆಯಲೆ...?

ವೀರಪ್ಪನ್, ಚಂದ್ರಸ್ವಾಮಿ, ಫೂಲನ್‌ದೇವಿಯರಂತಹ
ಡಕಾಯಿತರ ಬಗ್ಗೆ ಬರೆಯಲೆ ?

ಹಣದಾಸೆ, ಅಧಿಕಾರದ ದಾಹಕ್ಕಾಗಿ
ಕಪ್ಪೆಯಂತೆ ಕುಪ್ಪಳಿಸುವ ಕುಹಕ
ರಾಜಕಾರಣಿಗಳ ಬಗ್ಗೆ ಬರೆಯಲೆ ?

ಮಹಾತ್ಮಗಾಂಧೀಜಿ, ರಾಮಕೃಷ್ಣ ಪರಮಹಂಸ,
ಸ್ವಾಮಿ ವಿವೇಕಾನಂದರ ಜೀವನ
ಚರಿತ್ರೆಯನ್ನು ಬರೆಯಲೆ ?

ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಕೊಡಗಿನ
ಧೀರ ಗುಡ್ಡೆಮನೆ ಅಪ್ಪಯ್ಯಗೌಡರ
ಜೀವನ ಚರಿತ್ರೆಯನ್ನು ಬರೆಯಲೆ ?

ಸ್ವಾತಂತ್ರ್ಯದ ನಂತರ ದೇಶದೇಳಿಗೆಗೆ
ಶ್ರಮಿಸಿದ ಯಾವ ವ್ಯಕ್ತಿಯ
ಬಗ್ಗೆ ಬರೆಯಲಿ ?

ಅಂದಿರುವ ನಾಯಕರು ಇಂದಿಲ್ಲ
ಬೇಕು ಇಂದಿನ ಭ್ರಷ್ಟ ರಾಷ್ಟ್ರಕ್ಕೆ
ಅಪ್ಪಯ್ಯ ಗೌಡರಂತಹ ಧೀರನಾಯಕರೆಂದು
ಮನದಾಸೆಯಿಂದ ಬರೆಯಲೆ ?

● **ಅಮೆ ಬೆಳ್ಯಪ್ಪಶೇಖರ,** ಚೆಟ್ಟಿಮಾನಿ

ಬೆಳೆಯಲಿ

"ಯುಗ ಯುಗ ಕಳೆದರೂ
ಕೊಡಗು ಸಂಗಾತಿ ಬೆಳೆಯಲಿ,
ಪಕ್ಷ ಪಕ್ಷಗಳು ಕಳೆದರೂ,
ನವ ನವ ಸುದ್ಧಿ ತರಲಿ,
ನಿಮಿಷ ನಿಮಿಷಗಳು ಕಳೆದರು
ಗೌಡ ಜನತೆಗೆ ಹೊಸ ಜ್ಞಾನ ತುಂಬಲಿ."

● **ಚಂಡಿರ ರವಿ ಅಪ್ಪಾಜಿ,** ಬೆಂಗಳೂರು.

ಕನ್ನಡಿಯ ಎದುರಿನಲ್ಲಿ

ಕನ್ನಡಿಯ ಎದುರಿನಲ್ಲಿ ನಿಂತು
ಬಿಳಿಯಾದ ಕೂದಲಿಗೆ ಕಪ್ಪಾದ
ಬಣ್ಣವಚ್ಚಿ, ತಲೆಬಾಚಿ, ಗರಿಗರಿಯಾದ
ಬಟ್ಟೆ ಹಾಕಿ ನಿಂತ ಮುದುಕ.

ಮೊಸೆಗೆ ಕಪ್ಪನ್ನು ತೀಡಿ,
ಮತ್ತೊಂದು ಸಾರಿ ನೋಡಿ
ಕನ್ನಡಿಯಲ್ಲಿ, ಪರವಾಗಿಲ್ಲ
ನಾನು, ಇನ್ನೂ ಚಿಕ್ಕವ ಎಂದ.

ಬಟ್ಟೆಯನ್ನು ಹಾಕಿ, ತಲೆಯನ್ನು ಬಾಚಿ,
ಸ್ನೋ ಪೌಡರ್ ಹಚ್ಚಿ, ಹೊರಗೆ
ಸುತ್ತಾಡಿ ಬರುವ ಎಂದು ಹೊರಟ.

ಆದರೆ ಅವನ ಮೊಮ್ಮಗ
ಬಂದು ತಾತ, ಎಲ್ಲಿಗೆ ಎಂದು
ಕೇಳಿದ ತಕ್ಷಣ ಕುಸಿದು ಕುಳಿತ ಮುದುಕ.

● **ಕೆಮ್ಮಾರನ ಕಲಾನಾಗೇಶ್,** ಕುಶಾಲನಗರ

ನಿಜವಾದ ನಗುವಿನ ಮನುಷ್ಯನಾರು ?

ಕಲ್ಪನೆಯನ್ನು ಮಾಡಿ ನಗುವವನು ಕಾವ್ಯಗಾರ
ಕೋಪದಲ್ಲಿ ನಗುವವನು ಚಿಂತನಕಾರ
ಮೋಹದಲ್ಲಿ ನಗುವವನು ಮೋಸಗಾರ
ನೀತಿಯುತವಾಗಿ ನಗುವವನು ತತ್ವಜ್ಞಾನಿ
ತನ್ನನ್ನು ತಾನೇ ಮೈ ಮರೆತು ನಗುವವನು ಪ್ರೇಮಿ
ಮಹಿಮೆಯಲ್ಲಿ ನಗುವವನು ಭಕ್ತ
ಅಹಂಭಾವದಲ್ಲಿ ನಗುವವನು ಶತ್ರು
ಗಾಂಭೀರ್ಯವಾಗಿ ನಗುವವನು ಅರಸ
ಯೋಚಿಸಿ ನಗುವವನು ಬುದ್ಧಿವಂತ
ಆಡಿಸಿ ತೋರಿ ನಗುವವನು ನಾಟಕಕಾರ
ಪ್ರತಿಕ್ಷಣದಲ್ಲಿ ನಗುವವನು ಹುಚ್ಚ [ಮೂರ್ಖ]
ಎಷ್ಟೇ ಕಷ್ಟ ಬಂದರೂ, ಸಂತೋಷವೆಂದು ನಗು
ವವನೇ ಮನುಷ್ಯ.

● **ಬೊಳ್ತಜಿರ ಹರಿಣಿ ರೂಪ**

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 1837ರ ಸ್ವಾತಂತ್ರ್ಯ ಸಂಗ್ರಾಮ

(ಹಿಂದಿನ ಸಂಚಿಕೆಯಿಂದ)

ಕ್ಯಾಪ್ಟನ್ ಲೀಹಾರ್ಡಿ ಕೊಡಗಿನ ಪ್ರಥಮ ಬ್ರಿಟೀಷ್ ಸೂಪರಿಂಟೆಂಡೆಂಟ್ ರಾದರು. ಈಗ ಲೀಹಾರ್ಡಿಗೆ ರಾಜರನ್ನು ಯಾವರೀತಿ ಕೊಡಗಿನಿಂದ ಸಾಗಿಸಬೇಕೆಂಬ ಸಮಸ್ಯೆ ಉಂಟಾಗಿ ದಿವಾನ್ ಬೋಪು ರವರನ್ನು ಸಲಹೆ ಕೇಳಿದರು. ಆಗ ಬೋಪು ದಿವಾನರು ವೀರರಾಜೇಂದ್ರ ಒಡೆಯರಿಗೆ

ಲೇಖಕ : ಪೂಜಾರಿ ಪೊಣ್ಣಪ್ಪ

ಕಲವು ದಿನಗಳಿಂದ ಕಾಶೀ ಯಾತ್ರೆ ಮಾಡ ಬೇಕೆಂಬ ಆಸೆ ಇತ್ತೆಂದೂ, ಆದ್ದರಿಂದ ಕಾಶಿ ಯಾತ್ರೆಯ ನೆಪದಿಂದ ರಾಜರನ್ನು ಕಾಶಿಗೆ ಕಳುಹಿಸುವ ಏರ್ಪಾಡು ಮಾಡು ವುದು ಒಳ್ಳೆಯದೆಂದೂ ಲೀಹಾರ್ಡಿಯವ ರಿಗೆ ಸಲಹೆ ಮಾಡಿದರು. ಈ ಸಲಹೆಯನ್ನು ಲೀಹಾರ್ಡಿಯವರು ಒಪ್ಪಿ ಅದೇ ರೀತಿ ರಾಜರನ್ನು ಕಾಶಿಗೆ ಕಳುಹಿಸುವ ಏರ್ಪಾ ಡನ್ನು ಮಾಡಲು ಬೋಪು ದಿವಾನರಿಗೆ ಹೇಳಿದರು. ಲೀಹಾರ್ಡಿಗೆ ರಾಜರನ್ನು ಸೆರೆಹಿಡಿದ ವಿಷಯವೂ ಪ್ರಜೆಗಳಿಗೆ ಗೊತ್ತಾ ಗದಂತೆ ರಾಜರನ್ನು ಕಾಶಿ ಯಾತ್ರೆಯ ನೆಪದಲ್ಲಿ ಕೊಡಗಿನಿಂದ ಹೊರಗೆ ಆದಷ್ಟು ಬೇಗ ಕಳುಹಿಸಿ ಬಿಡಬೇಕಿತ್ತು. ಯಾಕೆಂ ದರೆ ಪ್ರಜೆಗಳಿಗೆ ರಾಜರನ್ನು ಬಂಧಿಸಿದ ವಿಷಯ ಗೊತ್ತಾದರೆ ಜನರು ದಂಗೆ ಎದ್ದಾರು ಎಂಬ ಭಯವಿತ್ತು. ಆದರೆ ಈ ವಿಷಯ ರಾಜರ ಆಪ್ತರಾದ, ಪುಟ್ಟ ಬಸವರಾಜ, ಹುಲಿಕುಂದ ನಂಜಯ್ಯ, ಚೆಟ್ಟಿಕುಡಿಯ, ಕುರ್ತು ಕುಡಿಯ, ಗುಡ್ಡೇರ ಅಪ್ಪಯ್ಯ, ಸೋಮಯ್ಯ, ಮಾಚಯ್ಯ ಮುಂತಾದವರಿಗೆ ಗೊತ್ತಿತ್ತು. ಲೀಹಾರ್ಡಿಯವರು ಬೋಪು ದಿವಾನರನ್ನು, ರಾಜರನ್ನು ಆದಷ್ಟು ಬೇಗನೆ ಮಡಿಕೇರಿ ಯಿಂದ ಸಾಗುಹಾಕಬೇಕೆಂದು ಆತುರ ಪಡಿಸಿದರು. ಬೋಪು ದಿವಾನರು ಲೀಹಾರ್ಡಿಯ ಆಜ್ಞೆಯಂತೆ ಆದಷ್ಟು ಬೇಗನೆ ರಾಜರು ಮಡಿಕೇರಿಯನ್ನು ಬಿಡುವಂತೆ ಏರ್ಪಾಡು ಮಾಡಿದರು. ರಾಜರು ಮತ್ತು ಅವರ ಪರಿವಾರ ಚಿನ್ನಾಭರಣ ದ್ರವ್ಯಗಳೊ ಡನೆ ಪಲ್ಲಕ್ಕಿಯಲ್ಲಿ ಕುಳಿತು ಮೈಸೂರು ಮಾರ್ಗವಾಗಿ ಹೆಬ್ಬಾಲೆಗಾಗಿ ಕಾವೇರಿ ನದಿ ಯನ್ನು ದಾಟಿ ಹೊರಟರು. ಅವರೊಡನೆ ಅವರ ಆಪ್ತರು ಕೊಡಗಿನ ಗಡಿಯವರೆಗೆ ರಾಜರು ಮತ್ತು ಅವರ ಪರಿವಾರವನ್ನು ಬೀಳ್ಕೊಡಲು ಹೋದರು.

ದಾರಿಯಲ್ಲಿ ರಾಜರು ತಾತ್ಕಾಲಿಕವಾಗಿ ಕಾಶಿಗೆ ಹೋಗುವುದೆಂದೂ, ಇಲ್ಲಿನ ಜನರು ಬ್ರಿಟೀಷರ ವಿರುದ್ಧ ಯುದ್ಧಮಾಡಿ ಬ್ರಿಟೀಷರನ್ನು ಕೊಡಗಿನಿಂದ ಓಡಿಸಿ ರಾಜ ರನ್ನು ಪುನಃ ಕೊಡಗಿಗೆ ಬರಮಾಡಿಕೊಳ್ಳ ಬೇಕೆಂದೂ ಚಿಕ್ಕವೀರರಾಜೇಂದ್ರರಿಗೂ ಮತ್ತು ಅವರ ಆಪ್ತರಿಗೂ ಮಾತುಕತೆಗಳು ನಡೆದಿದ್ದವು.

ಅತೀವವಾದ ದುಃಖದಿಂದ ರಾಜರ ಆಪ್ತರು ರಾಜರನ್ನು ಬೀಳ್ಕೊಟ್ಟ ಮೇಲೆ ತಮ್ಮ ತಮ್ಮಲ್ಲಿಯೇ ಬಹಳ ಗುಟ್ಟಿನಿಂದ ಬ್ರಿಟೀಷರ ಮೇಲೆ ಯುದ್ಧ ಮಾಡಿ ಅವ ರನ್ನು ಕೊಡಗಿನಿಂದ ಓಡಿಸುವ ರಾಜರ ಆಪ್ತರಲ್ಲಿ ಚರ್ಚೆಯಾಗಿ 1837ನೇ ಇಸವಿ 5ನೇ ಮಾರ್ಚ್ ತಾರೀಖು ಶಿವರಾತ್ರಿಯ ದಿನ ಮಡಿಕೇರಿ ಕೋಟೆಗೆ ಮುತ್ತಿಗೆ ಹಾಕು ವುದೆಂದು ತೀರ್ಮಾನವಾಯಿತು. ಈ ರೀತಿಯ ತೀರ್ಮಾನದ ವಿಷಯ ಸುಳ್ಯದ ಜಮೀನ್ದಾರರಾದ ಕೆದಂಬಾಡಿ ರಾಮಗೌಡ ಹಾಗೂ ಅಡಕ್ಕಾರು ಅಣ್ಣೆಗೌಡರಿಗೆ ತಿಳಿ ಯಿತು. ಈ ಸುದ್ದಿಯನ್ನು ಕೇಳಿದೊಡನೆ ಇವರಿಬ್ಬರು ಪುಷ್ಪಗಿರಿಯ ಹತ್ತಿರದಲ್ಲಿದ್ದ ಪುಟ್ಟಬಸವರಾಜರಲ್ಲಿಗೆ ಸುಳ್ಯದಿಂದ ಬಿಸ್ಲೆ ಘಟ್ಟದ ಮಾರ್ಗವಾಗಿ ಬಂದರು. ರಾಮ ಗೌಡರು ಮತ್ತು ಅಣ್ಣೆಗೌಡರು ಬಂದ ವಿಷಯವನ್ನು ಪುಟ್ಟಬಸವರಾಜರು, ಹುಲಿ ಕುಂದ ನಂಜಯ್ಯ, ಚೆಟ್ಟಿಕುಡಿಯ ಕುರ್ತು ಕುಡಿಯ, ಸೋಮಯ್ಯ, ಮಾಚಯ್ಯ ಮತ್ತು ಗುಡ್ಡೇರ ಅಪ್ಪಯ್ಯ, ಶಾಂತಳ್ಳಿ ಮಲ್ಲಯ್ಯನವರುಗಳಿಗೆ ತಿಳಿಸಿ ಅವರೆಲ್ಲಾ ಒಟ್ಟುಸೇರಿ ತಮ್ಮ ಮುಂದಿನ ಕಾರ್ಯ ಕ್ರಮವನ್ನು ಚರ್ಚಿಸಿದರು. ಆಗ ರಾಮ ಗೌಡರು ಬ್ರಿಟೀಷರ ಮೇಲಿನ ಯುದ್ಧವು ಸುಳ್ಯದಿಂದ ಪ್ರಾರಂಭವಾಗಬೇಕೆಂದೂ ದಕ್ಷಿಣ ಕನ್ನಡ ಜಿಲ್ಲೆಯ ಜನರು ಬ್ರಿಟೀಷರ ವಿರುದ್ಧ ಹೋರಾಟ ನಡೆಸಲು ಬದ್ಧರಿದ್ದಾ ರೆಂದೂ ಬ್ರಿಟೀಷರು ಕೊಡಗು ಸಂಸ್ಥಾನ ವನ್ನು ವಶಪಡಿಸಿದ ನಂತರ ಕಂದಾಯ ವನ್ನು ಹಣದ ರೂಪದಲ್ಲಿ ಕೊಡುವಂತೆ ಏರ್ಪಾಡು ಆದದ್ದರಿಂದ ಜನ ತಾವು ಬೆಳೆದ ಎಲ್ಲಾ ಧಾನ್ಯ ಮತ್ತು ಅಡಿಕೆ, ತೆಂಗು,ಒಳ್ಳೆ ಮೆಣಸನ್ನು ಸಾಹುಕಾರರಿಗೆ ಕಮ್ಮಿ ಬೆಲೆಗೆ ಮಾರಿ ಪುನಃ ತಮ್ಮ ವರ್ಷದ ಖರ್ಚಿಗೆ ಸಾಹುಕಾರರ ಶರಣು ಹೋಗಿ ರೈತರೆಲ್ಲರೂ ಸಾಹುಕಾರರ ಅಡಿಯಾಳು ಆಗುವ ಕಾಲ ಬಂದಿದೆ. ಎಂದೂ ಉಪ್ಪು ಮತ್ತು ಹೊಗೆಸೊಪ್ಪನ್ನು ಗುತ್ತಿಗೆಗೆ ಕೊಡಬೇಕಾದ ಸ್ಥಿತಿ ಬಂದುದರಿಂದ ಅದ ರಲ್ಲೂ ಗುತ್ತಿಗೆದಾರರ ಅಡಿಯಾಳಾಗಿ ಹೊಗೆಸೊಪ್ಪನ್ನೂ ಮಾರುವ ಕಾಲ ಬಂತೆಂದೂ ಕೊಡಗಿನ ರಾಜರ ಆಳ್ವಿಕೆಯಲ್ಲಿ ರೈತರು ಭತ್ತದ ರೂಪದಲ್ಲಿ ಕಂದಾಯ ಕೊಡುತ್ತಿದ್ದದ್ದು ಬಹಳ ಸುಲಭವಾಗಿ ತ್ತೆಂದೂ ಸಾಹುಕಾರರ ಆಶ್ರಯ ಪಡೆ ಯುವ ಅವಶ್ಯಕತೆ ಇರಲಿಲ್ಲ.

(ಮುಂದುವರಿಯುವುದು)

ನಿಷ್ಠೆ, ದಕ್ಷ, ಶಿಸ್ತು, ಪ್ರಾಮಾಣಿಕತೆಯ ಸೇವಾ ಮನೋಭಾವದ ಶುಶ್ರೂಶಕಿ

ಕೊಡಗನ ಚೋಂದಮ್ಮ (ಚಂದ್ರ) ರಾಮೇಗೌಡ

ಕೊಡಗು ಜಿಲ್ಲೆ, ಭಾಗಮಂಡಲನಾಡು, ಕಾರುಗುಂದ ಗ್ರಾಮದ ಶ್ರೀ ಕೊಡಗನ ಮುಂದಣ್ಣ ಮತ್ತು ಸಣ್ಣಮ್ಮ ದಂಪತಿಗಳ ಏಕ ಮಾತ್ರ ಪುತ್ರಿಯಾಗಿ ತಾ॥ 13–4–1943 ರಲ್ಲಿ ಜನಿಸಿದರು. ಇವರ ಒಬ್ಬನೇ ಒಬ್ಬ ಸಹೋದರ, ನುರಿತ ಅನುಭವಿ ವ್ಯವಸಾಯಗಾರರಾದ ಶ್ರೀ ಕೊಡಗನ ಮೊಣ್ಣಪ್ಪನವರು.

ಶ್ರೀಮತಿ ಚೊಂದಮ್ಮ (ಚಂದ್ರ) ಎಂದೇ ಪ್ರಖ್ಯಾತಿ. ಚಂದ್ರ ತನ್ನ ಬಾಲ್ಯದ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಕೊಡಗಿನಲ್ಲಿಯೇ ಹಳೆಯದು ಎನ್ನಲಾದ ಈಚೆಗೆ ಶತಮಾನೋತ್ಸವವನ್ನು ಆಚರಿಸಿಕೊಂಡ ಶಾಲೆಯಾದ ಕೊಟ್ಟೂರು ಗ್ರಾಮದ ಕೊಟ್ಟೂರು ಶಾಲೆಯಲ್ಲಿ 1949ರಲ್ಲಿ ಆಗಿನ ಬಾಲ ಶಿಕ್ಷೆಗೆ ಸೇರಿದ ಇವರು ಪ್ರಾಥಮಿಕ ಶಿಕ್ಷಣವನ್ನು ಅಲ್ಲಿ ಮುಗಿಸಿದ ನಂತರ ಮಿಡಲ್ ಮತ್ತು ಹೈಸ್ಕೂಲು ವ್ಯಾಸಂಗಕ್ಕಾಗಿ ನಾಪೋಕ್ಲಿನ ಸರ್ಕಾರಿ ಹೈಸ್ಕೂಲನ್ನು ಆಶ್ರಯಿಸಬೇಕಾಯಿತು. ಮನೆಯಿಂದ ಶಾಲೆಗೆ 10 ಮೈಲಿಗಳ ಅಂತರವನ್ನು ಕಾಲ್ನಡಿಗೆಯಲ್ಲಿಯೇ ನಡೆದು S. S.L.C. ತನಕ ಓದಿದರೂ S.S.L.C. ಯನ್ನು ಪಾಸುಮಾಡಲಾರದಾದರು. ಅಂದಿನ ಕಾಲದಲ್ಲಿ ಕೊಡಗಿನ ಪರಿಸ್ಥಿತಿಯೇ ಹಾಗಿತ್ತು. ಅಲ್ಲಿತನಕ ಓದಿದ್ದೆ ಹೆಚ್ಚೆನ್ನಬೇಕು.

ಮನೆಯಲ್ಲಿ ಸುಮ್ಮನೆ ಕುಳಿತು ಕಾಲಹರಣ ಮಾಡಲು ಇಷ್ಟ ಪಡದ ಚಂದ್ರ ಏನಾದರೂ ಮಾಡುವ ಮತ್ತು ಸಾಧಿಸಬೇಕೆನ್ನುವ ಛಲದಿಂದ ಆಗ ಸುಲಭದಲ್ಲಿ ಲಭಿಸುತ್ತಿದ್ದ ವೈದ್ಯಕೀಯ ಶುಶ್ರೂತಿಯ ತರಬೇತಿಯ ಸಂದರ್ಶನಕ್ಕೆ ಮಂಗಳೂರಿಗೆ ಹೋದ ಇವರು ಅಲ್ಲಿ ಆಯ್ಕೆಯಾಗಿ ಮೈಸೂರಿನ ಖ್ಯಾತಿ ಪಡೆದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ 1963 ನೇ ಇಸವಿಯಲ್ಲಿ ತರಬೇತಿಗಾಗಿ ಸೇರ್ಪಡೆಯಾದರು. ತರಬೇತಿಯ ಅವಧಿ 3 ವರ್ಷ 9 ತಿಂಗಳು ಆಗಿತ್ತು. ಅಲ್ಲಿ ಇವರು ಮೈಸೂರು ಕೇಂದ್ರಕ್ಕೆ ಮೊದಲಿಗರಾಗಿ ತೇರ್ಗಡೆ ಹೊಂದಿದ ಕೀರ್ತಿ ಇವರದ್ದಾಗಿದೆ.



ರಾಷ್ಟ್ರಕವಿ ಕುವೆಂಪು ಜೊತೆ ಚೋಂದಮ್ಮ (ಮಧ್ಯದಲ್ಲಿರುವವರು)

ದಿನಾಂಕ 18–11–66ರಲ್ಲಿ ತೇರ್ಗಡೆಯಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿಯೇ ಉದ್ಯೋಗಿಯಾಗಿ ಮುಂದುವರಿಯುವ ಸೌಲಭ್ಯ ಇವರದಾಯಿತು. ಸೇರ್ಪಡೆಯಾದ ಬರೀ ನಾಲ್ಕೆ ನಾಲ್ಕು ದಿವಸಗಳು ಅಂದರೆ 22–11–1966ರಲ್ಲಿ ಇವರು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಏಲಿಕೆರೆ ಗ್ರಾಮದ ಮಾದೇಗೌಡರ ಇಬ್ಬರು ಗಂಡು ಮಕ್ಕಳಲ್ಲಿ ಮೊದಲನೆಯವರಾದ ಶ್ರೀ ರಾಮೇಗೌಡರನ್ನು ವಿವಾಹವಾದರು. ಶ್ರೀಯುತ ರಾಮೇಗೌಡರು ಹಾಲಿ ಕ್ಯಾತನಹಳ್ಳಿಯ ವಿಶ್ವೇಶ್ವರಯ್ಯ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿ ದುಡಿಯುತ್ತಿದ್ದಾರೆ.

ಚಂದ್ರರವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು. ಇವರಲ್ಲಿ ಮೊದಲನೆಯವರು ಸಂಧ್ಯಾ, ಮಂಡ್ಯ ಜಿಲ್ಲೆಯ ರಾಯಶೆಟ್ಟಿಪುರದ ಮುಗುರೇಗೌಡರ ಮಗ, ಕೈಗಾರಿಕೋದ್ಯಮಿ ರಾಮಲಿಂಗಯ್ಯನವರನ್ನು ವಿವಾಹವಾಗಿದ್ದರೆ, ಎರಡನೆಯವಳಾದ ಜಮುನಾ ಕೊಡಗಿನ ಭಾಗಮಂಡಲದ ಏಲಕ್ಕಿ ಬೆಳೆಗಾರರಾದ ದೇವಂಗೋಡಿ ಮನೆತನದ ಗಿರೀಶ್‌ರವರನ್ನು ವಿವಾಹವಾಗಿದ್ದಾರೆ. ಗಿರೀಶ್‌ರವರು ಜೀ ವ ವಿ ಮಾ ನಿಗಮದ ಶಾಖೆ 1ರಲ್ಲಿ ಏಜೆಂಟ್ ಆಗಿ ಕೆಲಸ ನಿರ್ವಹಿಸುತ್ತಾ 'ಕೋಟ್ಯಾಧಿಪತಿ' (ಕ್ರೋರ್‌ಪತಿ) ಯೆಂಬ ಬಿರುದು ಪಡೆದ

ಕೀರ್ತಿಶಾಲಿ ಮತ್ತು ಮೈಸೂರಿನ ಪ್ರಸಿದ್ಧ ಮೂಳೆ ತಜ್ಞರಾದ ಡಾಕ್ಟರ್ ಮಹದೇವ್ ರವರ ಕ್ಲಿನಿಕ್‌ನಲ್ಲಿ ವ್ಯವಸ್ಥಾಪಕರಾಗಿ ದುಡಿಯುತ್ತಿದ್ದಾರೆ. ಮೂರನೇ ಪುತ್ರಿ ರೇಣುಕಾ ಬೆಂಗಳೂರಿನ ಕ್ಯಾತಮಾರನ ಹಳ್ಳಿಯ ಕ್ಯಾಪ್ಟನ್ ಹಾಗೂ ಪ್ರೊಫೆಸರ್ ಕ್ರಿಸ್ಟೀಯರವರ ಏಕೈಕ ಪುತ್ರ ಸನ್ನಿ ಯವರನ್ನು ವಿವಾಹವಾಗಿದ್ದಾಳೆ. ಅಂತ ರ್ಜಾತಿ ವಿವಾಹವಾದರೂ ಅನ್ಯೋನ್ಯ ಸುಖದಿಂದಿರುವ ಇವರು ಸಮಾಜದಲ್ಲಿ ಮಾದರಿ ದಂಪತಿಗಳಾಗಿದ್ದಾರೆ. ಸನ್ನಿಯು ಮೈಸೂರಿನ ಪ್ರಖ್ಯಾತಿ ಹೋಟೆಲ್ "ಕಿಂಗ್ಸ್ ಕೋರ್ಟ್"ನಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೊನೆ ಯವಳು ವಾಣಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಬಿ. ಎ. ಪದವಿ ಓದಿ ಈಗ M.B.A. ಸೇರುವ ಹವಣಿಕೆಯಲ್ಲಿದ್ದಾಳೆ.

ಕರ್ತವ್ಯದಲ್ಲಿದ್ದಾಗ ಇವರು ಬಹಳ ಶಿಸ್ತು, ನಿಯಮ, ನಿಷ್ಠೆಯ ಪ್ರಾಮಾಣಿಕ ತನದಲ್ಲಿ ದಿನದ 24 ಗಂಟೆಗಳಲ್ಲೂ ದುಡಿದ ಕೀರ್ತಿ ಇವರದು. ರಾತ್ರಿ ಹಗಲೆನ್ನದೆ ಕರೆ ಬಂದಾಗ ಓಗೊಡುವ ಅಸಾಮಾನ್ಯ ಸಿಸ್ಟರ್ ಎಂಬ ಪ್ರಖ್ಯಾತಿ ಇವರದು. ಚಾಕರಿ ಉದ್ಯೋಗಕ್ಕಾಗಲಿ, ವರ್ಗಾವಣೆ ನಿಮಿತ್ತವಾಗಲಿ, ವರನ್ವೇಷಣೆಗೆ ಅರಸಿ ಬಂದ ಯಾರನ್ನೇ ಆಗಲಿ, ತನ್ನ ಕೈಲಾದ ಸಹಾಯ ನೀಡಿ ಸಹಕರಿಸುತ್ತಿದ್ದರು ಮೃದು ಸ್ವಭಾವದ ಚಂದ್ರುರವರು. ಕಷ್ಟ ಸುಖಗಳಲ್ಲಿ ತಪ್ಪದೇ ಹಾಜರಾಗುವ ಇವರ ಸೇವಾ ಪರಿಣತಿಗೆ ಚಂದ್ರು ಬರಲಿಲ್ಲವೇ, ಎಲ್ಲೂ ಕಾಣಲಿಲ್ಲವಲ್ಲ, ಹತ್ತಿರದವರು ಯಾಕೆ ಬಾತ್‌ಲ್ಲೆ, ಬರ್‌ಗಿತ್ತಲ್ಲ ಎನ್ನು ತ್ತಿದ್ದರು. ಕೆಟ್ಟದ್ದಾಗಿ ಯಾರನ್ನೂ ನಡೆಸಿ ಕೊಂಡಿದ್ದಿಲ್ಲ. ರೋಗಿಗಳಾಗಿ ಬಂದು ಇವರ ಆತಿಥ್ಯದಿಂದ ಗುಣಮುಖಿಯಾಗಿ ಹೋದ ವರಿಗೆ "ಚಂದ್ರು" ಎಂದರೆ ಎಲ್ಲಿಲ್ಲದ ಅಕ್ಕರೆ, ಪ್ರೀತಿ. ಅಂತಹ ಕರುಣಾಮಯಿ ಇವರ ಸಹಾಯ ಯಾಚಿಸುತ್ತಿದ್ದವರಿಗೆ ಕೈಲಾದ ಧನ ಸಹಾಯ ಇಲ್ಲವೇ ಕನಿಷ್ಠ ಸಲಹೆ ಯನ್ನಾದರೂ ನೀಡುತ್ತಿದ್ದರು. ತನ್ನ ಸಹೋದ್ಯೋಗಿಗಳಾದ ಹಿರಿ ಕಿರಿಯರೆಲ್ಲ ರಿಗೂ ಅಚ್ಚುಮೆಚ್ಚಿನ ಸಹೋದರಿ ಚಂದ್ರು ವನ್ನು ಸಹಪಾಠಿಗಳು ಪ್ರೀತಿಯಿಂದ "ಮದರ್ ತೆರೇಸಾ" ಎಂದೆ ಸಂಭೋದಿಸಿ ತಮ್ಮ ಪ್ರೀತಿಯ ಒಲುಮೆಯನ್ನು ಹರಿಯ ಬಿಡುತ್ತಿದ್ದರು.

ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಅಗ್ನಿಗಾಹುತಿಯಾದಾಗ ಅಪಾರ ಸೇವೆ ಗೈದು ಮೈಸೂರಿನ ಅಂದಿನ ಜಿಲ್ಲಾಧಿಕಾರಿ ಯವರಿಂದ ಪ್ರಶಂಸನೀಯ ಪ್ರಶಸ್ತಿ ಪತ್ರ ವನ್ನು ಪಡೆದ ಹೆಗ್ಗಳಿಕೆ. 1995ನೇ ಜನ ವರಿಯಲ್ಲಿ ವಾಹನ ಅಪಘಾತವಾದಾಗ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಅವಿ ರತವಾಗಿ ಚಿಕಿತ್ಸೆ ನೀಡಿದ ನೆನಪಿಗಾಗಿ ಆಗಿನ D.Y.S.P. ಜೀಜಾಹರಿಸಿಂಗ್‌ರವರಿಂದ ಪ್ರಶಂಸ ಪತ್ರ ನೀಡಿಕೆ. ಹೀಗೆ ಮೆಚ್ಚಿಗೆ ಪಡೆದ ಪ್ರಶಸ್ತಿಗಳು ಹತ್ತು ಹಲವು ನೂರಾರು.

ರಾಷ್ಟ್ರಕವಿ, ಡಾ|| ಕೆ. ವಿ. ಪುಟ್ಟಪ್ಪ ನವರು ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳಲು ಸೂಕ್ತವಾದ ಹಿರಿಯ ಅನುಭವಿ ಶುಶ್ರೂಶಕಿ ಗಾಗಿ ಹುಡುಕುತ್ತಿದ್ದಾಗ ಆಯ್ಕೆಯಾದ ವರು ಈ ಚಂದ್ರು.

ಕುವೆಂಪುರವರ ಚಿಕಿತ್ಸೆಯ ಸಮಯ ದಲ್ಲಿ ಅವರ ಸಹಾನುಭೂತಿ ಪಡೆದ ಶ್ರೇಯಸ್ಸು ಇವರದು. ಹಾಗಾಗಿ ಅಂತಿಮ ಕ್ಷಣದ ತನಕವೂ ಅವಿರತ ಸೇವೆಯ ಕೃಪೆ ಅವರ ಒಂಟಿಕೊಪ್ಪಲಿನ ನಿವಾಸ "ಉದಯ ರವಿ" ಯಲ್ಲಿ ಹಗಲು ರಾತ್ರಿ ಯೆನ್ನದೆ ನಿರಂತರವಾಗಿ ಅವರ ಸೇವೆಯನ್ನು ಮಾಡಿದ್ದಾರೆ ಈ ಚಂದ್ರು.

ಇವರ ಅಪಾರ ಸೇವೆಯನ್ನು ಪರಿಗಣಿ ಸಿದ ಅಂದಿನ ಮುಖ್ಯಮಂತ್ರಿ ಬಂಗಾರಪ್ಪ ನವರ ಸರ್ಕಾರ ನಿವೇಶನವನ್ನು ಮಂಜೂರು ಮಾಡಲು ಆದೇಶಿಸಿತ್ತಾದರೂ ಏಕೋ ಏನೋ ಕೈಗೂಡಲಿಲ್ಲವೆಂದು ನೊಂದು ನುಡಿಯುತ್ತಾರೆ ಅವರಪತಿ ರಾಮೇಗೌಡ್ರು.

ಈ ಹಂತದಲ್ಲಿ ಇವರಿಗೆ ಹಿರಿಯ ಶಶ್ರೂ ಶಕಿ ಹುದ್ದೆಗೆ ಬಡ್ತಿಯಾಯಿತು. ಈ ಹುದ್ದೆಯಲ್ಲಿ ಸುಮಾರು 9 ವರ್ಷಗಳ ಸೇವೆ ಸಲ್ಲಿಸುವ ಅವಕಾಶ ಹಾಗೂ ನರ್ಸಿಂಗ್ ಸೂಪರಿಂಟೆಂಡೆಂಟ್ ಗ್ರೇಟ್ II ಹುದ್ದೆ ಗೇರುವ ಹವಣಿಕೆಯಲ್ಲಿರುವಾಗಲೇ ತಾ|| 25–9-1997ರಲ್ಲಿ ಬೆಳಗ್ಗಿನ ಜಾವ 1–30ಕ್ಕೆ ತಮ್ಮ ಸ್ವಗೃಹದಲ್ಲಿ ಹೃದಯಾ ಘಾತದಿಂದ ವಿಧಿವಶರಾದರು.

ಸೇವೆಯಲ್ಲಿರುವಾಗಲೇ ಛಲದಿಂದ S.S.L.C. ಯನ್ನು ದ್ವಿತೀಯ ದರ್ಜೆ ಯಲ್ಲಿ ಪಾಸು ಮಾಡಿ ಪ್ರತಿಹಂತದಲ್ಲಿಯೂ ಅಪಾರ ಅನುಭವ, ಸೇವಾ ಮನೋಭಾವ ಕೀರ್ತಿಯೊಂದಿಗೆ ಮುಂದಿನ ಹುದ್ದೆಗೆ ಮುಂಬಡ್ತಿ ಪಡೆಯುತ್ತಾ, ಕಿರಿಯರಿಗೆ ಮಾದರಿಯಾಗಿದ್ದ ಈ ಕರುಣಾಮಯಿಯ ಬಗ್ಗೆ "ಸಂಗಾತಿ" ಕಿವಿಯಿಂದ ಕೇಳಿತ್ತೇ ವಿನಹ ಸ್ವತಃ ಪರಾಂಬರಿಸಲಿಲ್ಲ. ಇವರ ಉತ್ತಮ ಸೇವಾ ಮನೋಭಾವದ ನಡತೆ, ನಮ್ಮ ಸಮಾಜದ ಕಿರಿಯರಿಗೆ ಮಾರ್ಗ ವಾಗಲೆಂಬುದೇ ಈ ಲೇಖನದ ಉದ್ದೇಶ ವಾಗಿದೆಯೆನ್ನುವುದರ ಜೊತೆಗೆ ಪ್ರತಿಭೆ ಗಳನ್ನು ಹೆಕ್ಕುತ್ತಿರುವಾಗ ಸಿಕ್ಕಿದ ನಿಧಿ ಯೆಂದು "ಸಂಗಾತಿ" ಭಾವಿಸಿ ಓದುಗರ ಮುಂದಿಡುತ್ತಿದೆ.

● ಪಟ್ಟಡ ಪ್ರಭಾಕರ್

ನಿಮ್ಮ ಪತ್ರಗಳು

ಎಲ್ಲರ ನಿಸ್ವಾರ್ಥ ಸಹಕಾರ ಅಗತ್ಯ

ಮಾನ್ಯರೇ,

ಕೆಲವು ತಿಂಗಳುಗಳಿಂದ "ಕೊಡಗು ಸಂಗಾತಿ" ನಮಗೆ ಬಂದು ತಲುಪುತ್ತಿದೆ. ಪ್ರಾರಂಭದಲ್ಲಿ ನಮಗೆ ಏನೂ ಅನ್ನಿಸಲಿಲ್ಲ. ಆದರೆ ನಿಗದಿತವಾಗಿ ಬರತೊಡಗಿದಾಗ ನಮಗೆ ಆಶ್ಚರ್ಯ ಹಾಗೂ ಕುತೂಹಲ ಉಂಟಾಯಿತು. ನಾವೇನು ಚಂದಾದಾರರಾಗಿಲ್ಲ, ಬೇಡಿಕೆಯೂ ಸಲ್ಲಿಸಿರಲಿಲ್ಲ, ನಮ್ಮ ವಿಳಾಸವನ್ನೂ ನೀಡಿಲ್ಲ, ಹಾಗಿದ್ದರೂ ಬರುತ್ತಿದೆ. ಯಾರೋ ನಮಗೆ ಪರಿಚಯದವರು ನಮ್ಮ ಬಗ್ಗೆ ಮಾಹಿತಿ ನೀಡಿರಬೇಕೆಂದು ಸುಮ್ಮನಾದೆವು. ಆದರೂ ಈ ಪಾಕ್ಷಿಕವನ್ನು ಹೇಗೆ ನಡೆಸುತ್ತೀರಿ ಎಂಬ ಬಗ್ಗೆ ಜಿಜ್ಞಾಸೆಯಿತ್ತು. ಏನೇ ಆದರೂ ನಿಮ್ಮ ಪ್ರಯತ್ನ ಮೆಚ್ಚತಕ್ಕಂತದೆ. ನಿಜವಾಗಿಯೂ ಒಂದು ಪತ್ರಿಕೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದು ಸಾಧಾರಣ ಕಾರ್ಯವಲ್ಲ. ಅದರಲ್ಲಿಯೂ ಒಂದು ಜನಾಂಗದ ಪತ್ರಿಕೆಯಾಗಿ ಹೊರತರುವುದು ಅಸಾಧಾರಣ ಕೆಲಸ. ಈ ಪ್ರಯತ್ನಕ್ಕೆ ಎಲ್ಲರ ನಿಸ್ವಾರ್ಥ ಸಹಕಾರ ಬೇಕು.

ನಿಮ್ಮ ಇತ್ತೀಚಿನ ಸಂಚಿಕೆಯಲ್ಲಿ ಪತ್ರಿಕೆ ನಡೆಸಿಕೊಂಡು ಹೋಗುವಲ್ಲಿ ನೀವು ಪಡುತ್ತಿರುವ ಬವಣೆ ಹಾಗೂ ಬೇಡಿಕೆಗಳ ಬಗ್ಗೆ ಸೂಚ್ಯವಾಗಿ ತಿಳಿಸಿರುವಿರಿ. ನಿಮ್ಮ ಪ್ರಯತ್ನ ಯಶಸ್ವಿಯಾಗಲೆಂದು ನಾವು ರೂ. 1,000–00 (ಒಂದು ಸಾವಿರ) ಚೆಕ್ಕನ್ನು ಈ ಮೂಲಕ ಕಳುಹಿಸುತ್ತಿದ್ದೇವೆ.

● **ಅನೆ ಕುಶಾಲಪ್ಪ ಸೋಮಣ್ಣ,** ಬೆಂಗಳೂರು

ಹಳೆ ಅನುಭವ ಗ್ಯಾನ ಆತ್

ಮಾನ್ಯರೇ,

ನಿಮ್ಮ ಸೆಪ್ಟಂಬರ್ 1–15ರ ಪತ್ರಿಕೆ ಸಿಕ್ಕಿತ್. ಅದರ್ಲಿ ಮದೆ ಗ್ರಾಮದ ಬಿ. ಆರ್. ಜೋಯಪ್ಪಣ್ಣ ಬರ್ದ "ಚಾಮೆವ್ವ ನಕ್ಕಲೆ ನಾಲ್ಕ್ ಮಾತ್" ನ ಕತೆ ಓದಿ ನಂಗೆ ಬಾಳ ಖುಷಿ ಆತ್. ಜೋಯಪಣ್ಣನಂತ ಕತೆ ಹೇಳ್‌ವವರ್ನ ಕಂಡ್ ಹಿಡ್ದೋಳರೆಲೆ, ನೀವು ಪರ್ವಾಗಿಲ್ಲೆ. ಅವರಂಗೆ ಕತೆ ಹೇಳ್ವವು ಇನ್ನೆಷ್ಟೊ ಜನ ಇರ್‌ವೋ.

ಅವರ ಕತೆನ ಓದ್‌ಕನ ನಂಗೆ 55 ವರ್ಷದ ಹಿಂದೆ ನನ್ನ ಚಾಮೆವ್ವನೊಟ್ಟಿಗೆ ಪಾಲೂರ್‌ನ ನೆಂಟ್ರ ಮನೆಗೆ ಹೋದ ಅನುಭವ ಆತ್. ನಮ್ಮ ಊರ್ ದಾರಿನ ಚಿತ್ರನ ಬಾಳ ಲ್ಯಾಕ್‌ಲಿ ಬರ್ದೋಳೊ. ಚಾಮೆವ್ವನ ಬಾಯಿಂದ ಈಗನ ಗೂಡೆ ಹೈದಂಗಳಿಗೆ ಬುದ್ಧಿ ಹೇಳಿ ನಮ್ಮ ಧರ್ಮನ ತೋರಿಸಿ ಕೊಟ್ಟೋಳೊ. ಚಾಮೆವ್ವನ ಕಣ್ಣ್‌ಲಿ ನೀರ್ ಬಾತ್ ತೇಳ್ಕನ ನನ್ನ ಕಣ್ಣ್‌ಲೂ ಎರ್ಡ್ ತೊಟ್ಟ್ ನೀರ್ ಹನ್ನಿತ್.

ಇಂತ ಕತೆಗಳ್ನ ಸಂಗಾತಿನ ಮೂಲಕ ನಾವ್ಗೆ ಹೇಳಿಗೊತ್ತಾತಾ ?

● **ಪೂಜಾರಿ ಮೊಣ್ಣಪ್ಪ,** ಬೆಂಗಳೂರು.

ಧ್ರುವತಾರೆಯಂತೆ ಪ್ರಜ್ವಲಿಸಲಿ

ಮಾನ್ಯರೇ,

"ಕೊಡಗು ಸಂಗಾತಿ" ಈ ಹೊತ್ತಿಗೆಯು ಈ ಶತ ಶತಮಾನಗಳ ಮುಂದೆ ಮುಂದೆಯೂ ಪ್ರಜ್ವಲಿಸಿ ಸರ್ವರಿಗೂ ಧ್ರುವತಾರೆಯಂತೆ ಬಂದು ಅನುರತೆಯ ಕೊಡುಗೆಯಾಗಿ ನಮ್ಮ ಗೌಡ ಜನಾಂಗದಲ್ಲಿ ಉಳಿಯಲೆಂದು ನಮ್ಮೆಲ್ಲರ ಶುಭ ಹಾರೈಕೆ.

● **ಕೆ. ಟಿ. ಧನ್ಯಪುಣ್ಯ,** ಮಡಿಕೇರಿ.

ಅಚ್ಚು ಮೆಚ್ಚಿನ ಪತ್ರಿಕೆಯಾಗಲಿ

ಮಾನ್ಯರೇ,

ಕನ್ನಡ ಭಾಷೆ ಹಾಗೂ ಅರೇ ಭಾಷೆಯ "ಕೊಡಗು ಸಂಗಾತಿ" ಪತ್ರಿಕೆಯು ಆರಂಭಿಸಿರುವ ನಿಮಗಳೆಲ್ಲರ ಕಾರ್ಯ ತುಂಬಾ ಶ್ಲಾಘನೀಯ. ಕೊಡಗು ಸಂಗಾತಿ ಪ್ರತಿಯೊಬ್ಬ ಗೌಡ ಜನಾಂಗದ ಅಚ್ಚು ಮೆಚ್ಚಿನ ಪತ್ರಿಕೆಯಾಗಲಿ ಎಂದು ಹಾರೈಸುತ್ತೇನೆ.

● **ಟಿ. ಕೆ. ಹೊನ್ನಪ್ಪ,** ರಾಜಸ್ಥಾನ್.

ಅರೆ ಭಾಷಿಕಾ ವಿಭಾಗ

ಹಳ್ಳಿ ಜನ ಜೀವನದ ಪರದಾಟದ ಒಂದು ನೋಟ

ಈಗ ತಾನೇ ನಾಟಿ ಕೆಲ್ಸ ಎಲ್ಲಾ ಮುಕ್ತ್. ಹಂಗೇನೆ ನಾಟಿ ಕೆಲ್ಸ ಮುಗ್ದ ಮ್ಯಾಲೆ ಕೈಲ್ ಮುಹೂರ್ತ ಆಚರಿಸುದು ಕಳ್ತ್. ಕಾವೇರಿ ಸಂಕ್ರಮಣ ಹತ್ರ ಬರ್ತಾ ಉಟ್ಟು, ಗದ್ದೆಲಿ ನಾಟಿ ಈಗ ಹೊಡೆ ಕಟ್ಟಿ ಕದ್‌ರ್ ಹೊರ್‌ಡ್ತಾವುಟು.

ನಮ್ಮ ಕೊಡಗ್‌ನ ಜನ ವ್ಯವಸಾಯಗಾರರ್‌ತ ಎಲ್ಲವುಕೆ ಗೊತ್ತು. ಆದ್ರೆ ಈ

ಮುಂಞಂಡ್ರ ರಮೇಶ್

ಗದ್ದೆ ಹೂಡಿಕೆ ಸುರು ಮಾಡ್ವಲ್ಲಿಂದ ಬೆಳೆ ಕೊಯ್ದ್ ಭತ್ತ ಮನೆಗೆ ಬರುವರೆಗೆ ಜನ ಏನೆಲ್ಲಾ ಗಲಾಟೆ ಮಾಡಿಕಂಡವೆ. ಅದರ ಕೆಲವು ತುಣುಕುಗಳ್ನ ವಾ ನಿಮ್ಗೆ ತಿಳಿಸಿನೆಬಲಾ.

ಬಿಸು ಹಬ್ಬ ಬಾತ್‌ತೇಳ್ರೆ ಗದ್ದೆಗೆ ಎತ್ತ್ ಕಟ್ಟಿಕೆ ಸುರು ಮಾಡ್ವೆ. ಅಲ್ಲಿಂದ ಹಿಡ್ದ್ ಭತ್ತ ತಂದ್ ಕಡಿಕೆಗೆ ತುಂಬ್ಸುವರೆಗೆ ಜನ ಹಗಲ್ ರಾತ್ರಿತ ಗದ್ದೆಲೇ ಕೆಲ್ಸ. ಅವನ ಗದ್ದೆದ್ ಕುಂಬೆ ಕಡ್ಡ್ ಇವನ ಗದ್ದೆಗೆ ಬುಡ್ದು, ತೋಡ್ ಬಾಯಿ ಹತ್ರ ಯಾರ್ದಾರ್ ಗದ್ದೆ ಇದ್ರೆ ನೀರ್ ತುಂಬಾ ಹತ್ಸಿಬುಡ್ದು, ಏಕಲ್ ಗದ್ದೆದ್ ನೀರ್ ಒಣಗಿಸಿ ಬುಡ್ದು ಹಿಂಗೆಲ್ಲ ತೊಂದ್ರೆ ಕೊಡ್ದು ತೇಳ್ರೆ ನಮ್ಮ ಜನಕೆ ಬಾರೀ ಖುಷಿ. ಇವರ್ಲ್ಲಿ ನಮ್ಮ ಕಂಬು ಎತ್ತಿದ ಕೈ. ಹಗಲ್ ತಿಲ್ಲೆ,ರಾತ್ರಿ ತಿಲ್ಲೆ ಕಲ್ಲುರ್ಟಿ ದೆವ್ವ ಸುತ್ತಿದಂಗೆ ಗದ್ದೆಲೇ ಸುತ್ತುತಿದ್ದದೆ.

ಒಂದ್ ದಿನ ಕಂಬುಗು, ಕುಂಞ್ಞಂಗೂ ಹತ್ತಿಕಣ್ತಲ್ಲ ಜಗಳ. ಯಾಕೆ ತೇಳ್ರೆ ಕುಂಞ್ಞ ಗದ್ದೆ ಪುಣಿಗೆ ಮಣ್ಣ್ ಮಡ್‌ಗಿ ನಾಳೆ ನಾಕ್‌ಸಾಲ್ ಹೂಡಿ ನಾಟಿ ಮಾಡೋಕು ತೇಳಿ ರಾತ್ರಿ ಹದಕ್ಕೆ ನೀರ್ ಬುಟ್ಟ್ ಬಂದಿತ್. ರಾತ್ರಿ 7 ಗಂಟೆಗೆ ಕಂಬು ಕೈಲೊಂದು ಕತ್ತಿ ಹಿಡ್ಕಂಡ್, ಬ್ಯಾಂಗೈ ಕಟ್ಟಿಕಂಡ್ ಕತ್ತಲೆಲೆ ಗದ್ದೆಗೆ ಹೊರ್ಟತ್. ಕುಂಞ್ಞನ ಗದ್ದೆಂದ ಕೆಳಗೆ ಕಂಬುನ ಗದ್ದೆ. ಕುಂಞ್ಞ ಹದಕೆ ಬಿಟ್ಟ ನೀರ್ನ ಕಂಬು ದಪ್ಪಲಿ ಹತ್ಸಿಬುಟ್ ಮನೆಗೆ ಬಾತ್. ಬೆಳಿಗ್ಗೆ ಎದ್ದ್ ಕುಂಞ್ಞ ಹೂಡಿಕೆ ಹೋದರೆ ಗದ್ದೆಲಿ ನೀರ್ ಏರಿ ಬಾರಿ ತುಂಬಿ ಮೊಗೆತಿತ್ತ್. ಇದ್ ಕಂಬುದೆ ಕೆಲ್ಸ ತೇಳಿ, ಕಂಬಗೆ ಬಯ್ಕಂಡ್ ನೀರ್ನೆಲ್ಲಾ ತಪ್ಸಿಸ್‌ಕನ ಅರ್ಧ ಗಂಟೆಗೆ ನೀರ್ ಕಮ್ಮಿ ಆತ್. ಅಷ್ಟೊತ್ತಿಗೆ ಕಂಬು ಬಾತ್. ಏ ಕಂಬು ನೀನ್ ಹೊಟ್ಟೆಗೆ ಅನ್ನ ತಿಂದಿಯಾ ಇಲ್ಲಾ ಹೇಲ್ ತಿಂದಿಯಾ. ನಾನ್ ನಾಟಿ ಮಾಡಕುತೇಳಿ ನಿನ್ನೆ ನೀರ್ ಹತ್ಸಿರೆ ಹಿಂಗೆರ ಮಾಡ್ದು. ಅಂತವ, ಇಂತಹ...ತೆಲ್ಲಾ ಬೈಕಂಡೊ. ಹಂಗೂ ಹಿಂಗೂ ನಾಟಿ ಕೆಲ್ಸ ಎಲ್ಲಾ ಮುಗ್ತ್. ನೀರ್‌ನ ವಿಷಯಕ್ಕಂತೂ ಯಾಗೋಳು ಎಲ್ಲವುಕೂ ಜಗಳ, ಹೊಡೆದಾಟ, ಪರದಾಟ, ತಪ್ಪಿಕ್ಕೆಲೆ. ಈ ವಿಷಯಲಿ ಅವನ ಮೊಖ ಕಂಡರೆ ಇವಂಗೆ ಆಕಿಲೆ, ಇವನ ಮೊಖ ಕಂಡರೆ ಅವಂಗೆ ಆಕಿಲೆ.

ನಾಟಿ ಮುಗ್ದ್‌ಂಗೆ ಕೈಲ್ ಮುಹೂರ್ತ ಬಂದದೆ ನಾಳೆ ಕೈಲ್ ಮುಹೂರ್ತ ತೇಳ್ರೆ ಇಂದ್ ಹಂದಿ ಹೊಡೆದು ಕ್ರಮು. ಈ ಹಬ್ಬಲಿ ಕುಡ್ಯದು, ತಿಂಬೋದು ಮಾಮೂಲಿ ಇರ್ದು. ಎಷ್ಟೇ ಜಗಳ ಆಡ್ರು ಅಂದ್ ಎಲ್ಲಾ ರಾಜಿತ ಹೇಳುವೆ, ಅದ್ ಎಲ್ಲಾ ಒಂದ್ ಹದಲಿ (limit) ಇದ್ದರೆ ಸರಿ. ಕುಡ್ಕದ್ ಸ್ವಲ್ಪ ಜಾಸ್ತಿ ಆದರೆ ಆಗಲೆ ಮಲ್ಲ ಯುದ್ಧ ಶುರು ಆದೆ. ಹಳೇ ವಿಷ್ಯನ್ನೆಲ್ಲಾ ಕೆದ್ಕಿ ಹೊಡದಾಡಿಕಂಡ್, ಕೈ ಕಾಲ್ ಪೆಟ್ಟ್ ಮಾಡಿಕಂಡ್ ಬೆಳಿಗ್ಗೆ ಎದ್ದರೆ ಒಬ್ಬೊಬ್ಬರ ಮೊಖ ನೋಡಿಕಾದುಲೆ.

ಈಗಂತು ಕಾವೇರಿ ಸಂಕ್ರಮಣ ಕಳ್ತ್. ಹಂದಿಗೆಲ್ಲಾ ಗೂಡುಲಿ ಒಳೊ. ಸ್ವಲ್ಪ ಗದ್ದೆ ಹಣ್ಣಾತ್ ತೇಳ್ರೆ ಹಂದಿಗ, ಕೋಳಿಗ ಎಲ್ಲಾ ಗದ್ದೆಲಿ ಇದ್ದವೆ. ಆಗ ಜನಗಳ ಹೊಡೆದಾಟ, ರಂಪಾಟ ಕೇಳಿಕಾದ್ಲೆ. ಹೀಂಗೆ ಹೋಕಾಕನೆ ಕುದ್ಕಂಗ ಕೋಳಿಗಳ ಪಡನೆಟ್ಟನ ಕಚ್ಚಿಕಂಡ್ ಹೋದು. ಗದ್ದೆ ಕೊಯ್ಲು ಸಮೆಲಿ ಕೋಳಿ ಕಾಪ್‌ಂದ ಮರಿಗಳ ಇಳ್ಸಿದ್ದವೆ. ಹೇಂಟೆ ಮರಿಗಳ ಗದ್ದೆಗೆ ಕರ್ಕಂಡ್ ಹೋಕಾಕನ ಇದ್ರ ಕುರ್ಕ ಹೊರ. ಬೋಟೆ ಚವ್ವ ತೆರೆ ನಾಯಿ ಕೂಡೋ ಮಕ್ಕಳ ಕರ್ಕಂಡ್ ಹೋರ್ಟ್ಂಗೆ ಹೊರಟತ್ ನೋಡು! ಮನೆವೆಲ್ಲ ಹಂದಿಗಳ ಹಗಲ್ ಗೂಡ್‌ಲಿ ಹಾಕಿದ್ದವೆ. ರಾತ್ರಿ ಮೆಲ್ಲೆ ಗೂಡ್ ಬಾಗ್‌ಲ್ ತೆಗ್ದ್ ಬುಟ್ಟವೆ. ಬೆಳಗಾಕನ ಹಂದಿಗಳ "ಕುಟ್ಟೇ... ಕುಟ್ಟೇ... ಕುಟ್ಟೇ" ತ ಕರ್ದ್, ತೆಳಿ ಹೊಯ್ದ್ ಗೂಡಿಗೆ ಹಾಕಿವೆ. ಈ ವಿಷಯ ಗಂಡಂದರಿಗೂ ಗೊತ್ತಿರ್ಪುಲೆ. ಹೀಂಗೇ ನಡಿತಾ ಇದ್ದದೆ ನಮ್ಮ ಕೊಡಗ್‌ನ ಕಡೆ.

ಒಂದ್ ದಿನ ಹಿಂಗೇ ಇರ್ಕಾಕನ ಕಂಬುನ ಹಂದಿನ ಯಾರೋ ಗದ್ದೆಲಿ ಗುಂಡ್ ಹೊಡ್ದ್ ಹಾಕಿದೊ. ಬೆಳಿಗ್ಗೆ ಮಾಮೂಲಿ ನಂಗೆ ಎದ್ದ್ ಹಂದಿ ಕರ್ದರೆ ಹಂದಿಎಲ್ಯುಟು. ಬ್ಯಾಗಬಂದ್ ಗಂಡಂಗೆ ಹೇಳ್ತ್. ಅಲಾ, ಹಂದಿ ತಿನಿಗೆ ಬಾತಿಲ್ಲೆ ತ. ಆಗ ಗಂಡ, ನಿನ್ನ ದೊಂಡೆ ಕಟ್ಟಿಕೆ ರಾತ್ರಿ ಬುಡ್ದು. ಅದ್ ಎಲ್ಯಾರ್ ಗದ್ದೆಗೆ ಹೋಗಿ ಯಾರ್ಯಾರ್

[20ನೇ ಪುಟಕ್ಕೆ]

ತಾಬೆದಾರಿಕೆ ಪೊನ್ನಪ್ಪಣ್ಣ ಇನ್ನಿಲ್ಲೆ


ಗಂಡ್ ಎದೆಯ ದಿ|| ಕೂಡಕಂಡಿ ಅಯ್ಯಪ್ಪ ಪೊನ್ನಪ್ಪ

ಕೊಡಗ್ ಜಿಲ್ಲೆ, ಭಾಗಮಂಡಲ ನಾಡ್ ಬೇಂಗೂರ್ ಗ್ರಾಮದ ಕೂಡಕಂಡಿ ಅಯ್ಯಪ್ಪ ಮತ್ತ್ ಮುತ್ತಮ್ಮ ಅಪ್ಪವ್ವನ ಮೂರ್ ಗಂಡ್ ಮತ್ತ್ ಮೂರ್ ಹೆಣ್ಮಕ್ಕ ಗಳಲ್ಲಿ ಸುರುನವ ಆಗಿ ತಾ||1-11-1933 ರ್‌ಲಿ ಹುಟ್ಟಿದೊ. ಇವರ ಅಪ್ಪನವು ಆದರ್ಶ ಉಪಧ್ಯಾಯರ್ ಆಗಿ ಸೇವೆ ಸಲ್ಲಿಸಿದವು.

ಶ್ರೀ ಕೂಡಕಂಡಿ ಪೊನ್ನಪ್ಪನ ಎಲ್ಲವು ಪ್ರೀತಿಂದ ಪೊನ್ನಪ್ಪ ಲಾಯರ್, ಇಲ್ಲೇ ಪೊನ್ನಪ್ಪಣ್ಣತೇ ಕರ್ಯೆದು. ಇವು ಇವರ

ಪಟ್ಟಡ ಪ್ರಭಾಕರ್

ಪ್ರಾಥಮಿಕ ವಿದ್ಯೆನ ಕೊಡಗಿನ ಹಿರಿಯ ಮತ್ತ್ ಈಗೀಗ ಶತಮಾನೋತ್ಸವ ಆಚರಿಸ್ಕಂಡ ಕೊಟ್ಟೂರು ಗ್ರಾಮದ ಕೊಟ್ಟೂರು ಶಾಲೆ. ಮುಂದೆ ಮಿಡ್ಲ್ ಸ್ಕೂಲ್ ಮತ್ತ್ ಹೈಸ್ಕೂಲ್‌ನ ನಾಪೋಕ್ಲಿನ ಸರ್ಕಾರಿ ಶಾಲೇಲಿ ಓದಿ 1952ಕ್ಕೆ ಅಂದ್‌ನ VI th Formನ ಮುಗಿಸಿದೋ. PUC ನ ಮಡಿಕೇರಿ ಸರ್ಕಾರಿ ಕಾಲೇಜಿಲಿ ಓದಿದ್. ಹಂಗೆನೇ ಅರಣ್ಯ ಇಲಾಖೆಲಿ 2ನೇ ದರ್ಜೆ ಗುಮಾಸ್ತರಾಗಿ ಕಾರ್ಯ ನಿರ್ವಹಿಸ್ಕಂಡ್ ಬಂದೋ. ಇವು ತುಂಬಾ ಚುರ್ಕನ ಜನ. ತನ್ನ ಈ ಅಲ್ಪ ವಿದ್ಯೆ ಸಾಲ್‌ದ್ ತೇಳಿ, ಬೇಜಾರ್ ಆಗಿ ಮಾಡ್ತಿದ್ದ ಕೆಲ್ಸಕ್ಕೆ ರಾಜಿನಾಮೆಕೊಟ್ಟ್ ಮಡಿಕೇರಿ ಕಾಲೇಜಿಗೆ ಸೇರ್ಕಂಡ್, ಒಳ್ಳೆ ಫಲಿತಾಂಶ ತಕ್ಕಂಡ್ 1963ಲಿ ಡಿಗ್ರಿನ ಗಳಿಸಿಯೇ ಬುಟ್ಟೊ. ಆಗ ನಮ್ಮವು ಎಲ್ಲಾ ತುಂಬಾ ಕಡಿಮೆ ಓದ್‌ತ್ತಿದ್ದದ್ ಕಾಲೇಜಿಲಿ ಓದುತ್ತಿರುಕಾಕನ ಅಂದ್‌ನ ದಬ್ಬಾಳಿಕೆ ದಿನಗಳ್‌ಲಿ ಮಡಿಕೇರಿ ಕಾರ್ಯದರ್ಶಿ ಸ್ಥಾನಕ್ಕೆ ಧೈರ್ಯಂದ, ಗಂಡ್‌ಗಾರಿಕೆಯಿಂದ ಸ್ಪರ್ಧಿಸಿ ಗೆದ್ದ ಸುರುನ ಗೌಡ ಹೈದ ಎಂಬ ಹೆಗ್ಗಳಿಕೆ ಇವ್ಕಟ್ಟ್. ಇವ್ ತುಂಬಾ ಚೂಟಿ ಮತ್ತ್ ಚಾಣಾಕ್ಷ ಹೈದ ಗಡ. ಆಗಲೇ ಇವ್ರ್ ತಾಬೆದಾರಿಕೆ ತೇಳ್ವ ಗೌಡ ಪದ ಸಂಕಲನ ಬರ್ದೋಳೊ. ಇನ್ನ್



ಪೊನ್ನಪ್ಪಣ್ಣ

ಎಸ್ಸೋಟ್ ಸಹ ಬರ್ದೋಳೊ. ಮತ್ತ್ ಇವರ "ಏರಿಳಿತ ಕವನ" 1995ಲಿ ಬರ್‌ದದಕ್ಕೆ ದ. ಕ. ಜಿಲ್ಲಾ ತುಂಬೆ ಪದವಿ ಪೂರ್ವ ಕಾಲೇಜಿನವು ಇವುಕೆ 6ನೇ ಬಹುಮಾನ ಕೊಟ್ಟೋಳೋ. ಇವ್ ಒಳ್ಳೆ ಕ್ರೀಡಾ ಪಟು ಸಹ ಆಗಿದ್ದಲ್ಲದೆ ಉತ್ತಮ ಗುರಿಕಾರರ್ ಸಹ ಹೌದಾಗಿದ್ದೊ.

1963ಲಿ ಇವ್ ಡಿಗ್ರಿ ಪಡ್ಕಂಡ್ ನಂತರ ಬೆಂಗಳೂರಿಲಿ 'ಲಾ' ಓದಿ ಲಾಯರ್ ಆಗಿಯೇ ಬುಟ್ಟೊ. ಈ ಸಮಯಲಿ ಇವ್ ಬೆಂಗಳೂರಿಲೇ ಇದ್ ಕಂಡ್ ಗೌಡ ಸಮಾಜ ಹುಟ್ಟ್ ಹಾಕಿಕ್ಕೆ ಬೇರೆಯವ್ರ ಜೊತೆಗೆ ತುಂಬಾ ಸಹಕರಿಸೋಳೊ. ಇಂತವು ಮತ್ತ್ ಇನ್ ಹಲವರ ಶ್ರಮದ ಫಲವೇತ ಹೇಳಕ್ಕ್. ಬೆಂಗಳೂರಿಲಿ ಇಂದ್ ಬಾರಿ ಲಾಯ್ಕಲಿ ಸಮಾಜದ ಕಾರುಬಾರ್‌ಗ ನಡ್ದದೆತ ಸಂಗಾತಿಗೆ ತಿಳ್ದುಟು.

ಮಡಿಕೇರಿ ಪೇಟೆಲಿ ಇವ್ಕೆ ಒಂದು ಹಳೆ ಮನೆ ಉಟ್ಟ್ ಇದ್ ಸಂಡೊಮ್ಮೆ ಕೋಟೆಗೆ ಬೆಂಕಿ ಬಿದ್ದಿರ್ಕಕನ, ಅಂದ್ ತಂದ್ ಮರಗಳ್ನ ಇವರಜ್ಜಂದರ್ ಕಟ್ಟಿದ್ ಮನೆತ ಪಳಮೆ. ಸುಮಾರು 100 ವರ್ಷ ಆತ್‌ತ ಇವರ ಪಿಳ್ಳೆಕ ಈಗ ಹೇಳಿವೆ. ಈ ಮನೇಗೆ ಕೂಡಕಂಡಿ ಮನೆತ ಹೆಸ್ರ್. ಇಲ್ಲಿದ್‌ಕಂಡೆ ಇವ್ ಲಾ ಪ್ರಾಕ್ಟೀಸ್ ಕಡೆ ತನಕ ಮಾಡ್ದೋ. ಹಂಗಿರ್‌ಕ್ಕಾಕನ ಮಡಿಕೇರಿ ಏಲಕ್ಕಿ ಸೊಸೈಟಿಗೆ ಒಂದು ಅವಧಿಗೆ ಇವ್ ಡೈರೆಕ್ಟರ್ ಆಗಿ ಸೇವೆ ಸಲ್ಲಿಸಿಯೊಳೋ ಇವ್ ಅಸಾಮಾನ್ಯ ಬ್ಯಾಟೆಗಾರರು ಹೌದು. ಇಟ್ಟ ಗುರಿ ತಪ್ಪತ್ತಿತ್‌ಲೆ. ಮತ್ತ್ ಗೌಡರ ಜನಪದಗಳ್ನ ಬಾರೀ ಲಾಯ್ಕಾಗಿ ರಾಗ ಎಳ್‌ದ್ ನರ್ತನದ ಮೂಲ್ಕ ಹಾಡಿ ತೋರ್ಸಿತ್ತಿದ್ದೋ. ಇದ್ ನೋಡಿಕೆ ಬಾರೀ ಲಾಯ್ಕಾಗಿ ಇತ್ತಿರ್‌ತ್ತ್.

ಸಂಗಾತಿ ನೋಡ್ದಂಗೆ : ಸಂಗಾತಿ ಪತ್ರಿಕೆ ಕೈಗೆ ಬಂದಾಕ್ಷಣ ಎಷ್ಟೇ ಕೆಲ್ಸ ಇರ್ಲಿ ಅದರ್ನ ಅಲ್ಲೆ ಬುಟ್ಟ್ ಮೊದ್ಲ್ ಓದುದು ಸಂಗಾತಿಲಿರುವ ಅರೆಭಾಷಿಕಾ ವಿಭಾಗನ. ಮತ್ತ್ ಕನ್ನಡ ವಿಭಾಗನ ಓದ್ತಿದ್ದೊ. ಸಂಗಾತಿ ಯಾಗನೇ ಬಾದು, ಆತಾ, ಕೈಲುಟ್ಟಾ, ಯಾಕೆ ಲೇಟ್, ಲಾಯ್ಕಾಗಿ ಬರ್ತ್ ಉಟ್ಟ್, ನೀವೆಲ್ಲಾ ಹೈದಂಗ ಸೇರ್ಕಂಡ್ ಗೌಡ ಸಂಸ್ಕೃತಿನ ಬೆಳ್ಸೋಕು, ಬುಡಿಕಾಗದ್ ತ ಅಂತಿಮ ಕ್ಷಣದ ತನಕ ಸಹ ಹೇಳ್ತಿದ್ದೋ. ಇಂತಾ ಧೀರ, ಕಟ್ಟಾ ಗೌಡಾಭಿಮಾನಿಯಾದ ತಾಬೆದಾರ್ಕೆ ನೆಚ್ಚಿನ ಪೊನ್ನಪ್ಪಣ್ಣನವು ತಾರೀಖ್ 9-10-1997ಕ್ಕೆ ಅವರ ಸ್ವಗೃಹ ಕೂಡಕಂಡಿ ನಿಲಯಲಿ ಕೈಲಾಸ ವಾಸಿಯಾದೋತ ಹೇಳ್ಕೆ ಬೇಜಾರ್ ಆದೆ.

[19 ನೇ ಪುಟ ನೋಡಿ]

ಕುಳ್ಳು ಮಾವನ ಕಥೆ (ವ್ಯಥೆ)

ಕಲ್ಲುಮುಟ್ಲು ಬಾಲು, ಮೂರ್ನಾಡು

ಸಾಧಾರಣ ನಮ್ಮ ನಾಡ್‌ಕಡೆ ಆಗೆ, **ಬೆಳೆ,** ಕಾಫಿ ಕೆಲಸ ಮುಗ್ಸಿ ಆಕನಾ ಮದುವೆಗ ಸುರ್ ಆದವೆ. ಆಗ ವಿಳ್ಯಶಾಸ್ತ್ರ, ಮದುವೆಗ, ಕೂಸಿಗೆ ಹೆಸ್ರ್ ಹಾಕುದು, ಸಾವು, ಶುದ್ಧ, ಬೊಜ್ಜ ತೇಳ್ಕ್ಯಂಡ್ ತಿರ್‍ಗುದೇ ಆತ್. ಆಗ ದನ ನೋಡ್‌ವ ಕೆಲ್ಸನೆ ಕಮ್ಮಿ. ಹೊತಾರೆ ಹಟ್ಟಿಂದ ಬಿಚ್ಚಿ ಬುಟ್ರೆ ಬೈಸರಿಗೆ ವಾಪಸ್ಸು ಬಂದರೇ ಬಂದವೇ, ಬಾರದಿದ್ದರೆ ಯಾರಾರ ಹಟ್ಟಿಲೋ, ತೋಟಲೋ ಇರುತ್ತಿದ್ದೊ. ಕೆಲವ್ ಜನ ಎಲ್ಲಾ ಹಟ್ಟಿ ಉಬ್ಬಲ್ ತೆಗ್‌ದಿಡ್‌ತ್ತಿದ್ದೊ, ಬಂದವೂ ಹುಕ್ಕಡೆಲೋ, ದರ್‌ಗುಲೋ, ಹಲ್ಲುಮುಂಡಲೋ ಮಲ್‌ಗಿ ಹೊತಾರೇ ಎದ್ದ್ ಸಗಣಿ ಹಾಕಿ ಮನೆವ್ ಹಟ್ಟಿಗೆ ಹೊಕನಾ ಗದ್ದೆಲಿ ಇರುತ್ತಿದ್ದೊ.

ಬೇಸಿಗೆಲಿ ದನಗಳ ಹರಾವರಿ ಬುಡ್ದು ಮಾಮೂಲಿ. ಹಿಂಗಿರ್‌ಕಾಕನ ಕುಳ್ಳು ಮಾವನ ಗೂರಕ ಹಸ್ ಕ್ರಾಸಿಗೆ ಬಂದಿತ್ತ್. ಆಗ ಎತ್ತ್‌ಗಳ ಪಾಪತ್ತ್ ಏನ್. ಒಂದ್ ಕುಂಟ, ಒಂದ್ ಕುರ್‌ಡ, ಒಂದ್ ಉರುಚಿಕಂಡ್, ಒಂದ್ ರಕ್ತ ಉಚ್ಚೆ ಹೊಯಿಕಂಡ್, ಒಂದಕ್ಕೆ ತಟ್ಟೆ (ಮಂಟೆ)ಒಂದಕ್ಕೆ ಕೋಳ, ಒಂದಕ್ಕೆ ಕೈ ಕುಂಟು, ಹಿಂಗೆ ಒಂದರ ಹಿಂದೆ ಒಂದ್‌ತಾ ಹೊತ್ತಾಡಿಕಂಡ್ ಹೋದ್ ನೋಡಿಕ ಲಾಯಿಕ. ನಮ್ಮ ಕುಳ್ಳು ಮಾವನಲ್ಲಿ ಎರಡ್ ಎತ್ತ್‌ಗ, ಒಂದ್ ಗೊರಕ ಹಸ್, ಒಂದ್ ಗೊರಣ ತೇಳಿ ಈ ಹಸ್‌ನ ಹಿಂದೆನ ಕರ್. ಈ ಗುರಣಾ ಹೋರಿ ಹಂಞ ಸಣ್ಣದ್. ಅವ್ನನ ಹತ್ರ ಹೊಕನಾ ಬಾಕಿ ಇದ್ದವು ಕುತ್ತಿ ಓಡಸ್‌ತ್ತಿದ್ದೊ [ಪಾಪ ಇದಿಕೆ ಎಂತತ್ತ ಗೊತ್ತ್‌ಲೆ].

ಮಾರ್‌ನೆ ದಿನ ಹೊತಾರೇ ಕುಳ್ಳ ಮಾವ ಕಾಫಿ ಕುಡ್‌ದ್ ಹಟ್ಟಿಗೆ ಹೋಗಿ ಉಬ್ಬಲ್ ತೆಗ್ದ್, ಎತ್ತ್‌ಗಳ ಬುಟ್ಟ್, ಗೂರಣ ಹೋರಿನ ಬುಟ್ಟ್. ಈ ಗುರಕಾ ಹಸುನಾ ಕೊಂಬುದ್ ಹಗ್ಗ ಬಿಚ್‌ತಿತ್ತ್. ಅದ್ ಸ್ವಲ್ಪ ತುಂಡು ಹಗ್ಗ, ಕುಳ್ಳ ಮಾವ ಬಗ್ಗಿ ಕಂಡ್ ಇರುಕಾಕನ, ಈ ಗೂರಣಾ ಹೋರಿ ಹು ! ಹು ! ತೇಳಿಕ್ಕಂಡ್ ಓಡಿ ಬಂದ್ ಹತ್ತಿ ಬುಟ್ರೆ ಮಾವನ ಹಿಂದೆಂದ ಬೆನ್ನ್ ಮೇಲೆ, ಮಾವ ಅಯ್ಯೋ ನಿನ್ನ ನೆಗೆದ್‌ಬಿದ್‌ಹೋಗ ತೇಳಿ ಮುಂಗ್‌ರಿಸಿರೆ ಹಟ್ಟಿ ಬೇಲಿಗೆ, ತಲೆ ಹೆಟ್ಟಿತ್ ಬೀಟೆ ಕಂಬಕ್ಕೆ. ಮಾವಂಗೆ ತಲೆ ತಿರ್‌ಗಿದಂಗೆ ಆತ್. ಅಂತ್ ಎದ್ದ್ ಉಬ್ಬಲ್ ದೊಣ್ಣೆಲೇ ಎರ್‌ಡ್ ಮಡ್‌ಗಿತು. ಹೋರಿ ಜಡ್ತ್. ಇತ್ತ ಗೊರಕ ಹಸ್‌ನ ಬಿಚ್ಚಿ ಓಡಿಸಿ ಕಾಲ್ ನೋಡ್ರೆ ..! ಎರಡ್ ಮುಡ್ ಚಕ್ಕಳ ಜಾರಿ ಹೋವುಟ್. ಸೀದಾ ತೊಡ್‌ಗೆ ಹೋಗಿ ಕಾಲ್‌ಲ್ಲಿದ್ದ ಸೆಗ್‌ಣೆನ ತೊಳಕ್ಕಂಡ್ ಮರಗೋಡ್ ಭಟ್ಟ ಡಾಕ್ಟ್ರ ಹತ್ರ ಹೊಕನಾ ಅಂಗಡಿ ಕಮಲಾ ಹೊರಗೆ ಕಲ್‌ಲ್ಲಿ ಕುದ್ದ್‌ಕಂಡ್ ಬಿಸ್‌ಲ್ ಕಾಸ್‌ತಿತ್ತು. ಎಂತ್ತಾತ್ತ್ ಮಾವ, ಕಾಲ್‌ಲಿ ರಕ್ತಾ ಸುರ್‌ದದೇದಾ ಕೇಳ್ತ್.

ಎಂತಾ ಅದ್ ! ನಾ ಸಾಯುದೆ ಬಾಕಿ ! ಪಾಪ ಮಾವಂಗೆ ಎಂತಾ ಆವುಟು ತಾ ಕಮಲ ಗ್ಯಾನ ಮಾಡ್ತ್. ಮಾವಂಗೆ ಒಂದ್‌ಕಡೆ ಉರಿ, ಬ್ಯಾನೆ, ಸಿಟ್ಟ್ ನಾಚಿಕೇನೂ ಬೇರೆ. ಅಂತೂ ಭಟ್ಟ ಡಾಕ್ಟರ ಹತ್ರ ಹೋಗಿ ವಿಷಯ ಹೇಳಿ ಕಾಲ್ ಗಾಯಕ್ಕೆ ಹಂಞ "ಐಡಿನ್" ಮುಡ್ಸಿ, 100 ಔನ್ಸ್ ಬರೀಸ್ ಹಾಕ್‌ಕಾಕನ ಬ್ಯಾನೆ ಕಮ್ಮಿ ಆತ್. ಮಾವ ವಾಪಸ್ಸು ಬಾಕನ ಕಮಲ ಬಿಸಿಲ್ ಕಾಸುದ್ ಬುಟ್ಟ್ ಅಂಗಡಿ ಒಳಗೆ ಹೋಗಿ ಕುಂಟಿಕ್ಯಂಡ್ ಹೋದರ ನೋಡ್‌ತಿತ್ತ್. ಹಿಂಗೆ ಕುಳ್ಳು ಮಾವನ ಕಥೆ.

ಅದಿಕೆ ಹೇಳ್ದ್ ಈಗನವುಕೆ ಹಸ್‌ಗ ಕ್ರಾಸ್‌ಗೆ ಬಾಕನ ಬಾರಿ ಎಚ್ಚರಿಕೆಂದ ಇರಕುತಾ. ನಮ್ಮ ಕುಳ್ಳು ಮಾವನಂಗೆಲ್ಲಾ ಮಾಡಿಕಂಬೋದು ಬ್ಯಡಾತ.

[18ನೇ ಪುಟದಿಂದ]

ಇನ್ನೆ ಕೇವಲ 64 ವರ್ಷ ಆಗಿತ್ತ್ ಅಷ್ಟೆ. ಸುಡ್ಮುಳಿಲಿ ಗೌಡ ಹಿರಿಯಜ್ಜರೊಬ್ಬರ ಮಾತ್ನ ಪ್ರಕಾರ ಪೊನ್ನಪ್ಪ ಮತ್ತೆ ಸೋಮಯ್ಯನವುಕೆ ಒಳ್ಳ ಸಪೋರ್ಟ್ ಇದ್ದಿದ್ದರೆ ಜನಾಂಗ ಇನ್ನ್ ಮೇಲ್ಮಟ್ಟಕ್ಕೆ ಬಾತಿತ್ತೇನೊಂತ್ತೇಳುವ ವಿಷಯ ಸಂಗಾತಿ ಕಿವಿಯಾರೆ ಕೇಳಿಕ್ಯಾಕನ ಸಂಗಾತಿಯ ಕಣ್ಣ್‌ಲಿ ಸಹ ನೀರ್ ಬಾತ್.

ಪೊನ್ನಪ್ಪನವು ಜನಾಂಗಕ್ಯಾಗಿ ಅನುಪಮವಾಗಿ ಸೇವೆಗೈದರೂ, ಕೊನೆಯ ಕ್ಷಣಲಿ ನಿಶಾವು ತನ್ನ ವಿಷದ ಬಾಹುಲಿ ಬಂಧಿಸಿ ಅವರ ಸೇವೆ ಜನಾಂಗಕ್ಕಿನ್ನಿಲ್ಲದ್ದಂಗೆ ಮಾಡ್ದ್ ನಮ್ಮವರ ಪಾಲಿಗೆ ದುರಂತನೇ ಸರಿ.

ವ್ಯಕ್ತಿ ಏನೆ ಆದ್ರ್ ಅವರಲ್ಲಿನ ಉತ್ತಮ ವಿಶೇಷ ವ್ಯಕ್ತಿತ್ವನ ಮಾತ್ರ ಸಂಗಾತಿ ಹೆರ್ಕಿ ಹೆರ್ಕಿ ನೋಡಿ ತೆಗೆದುಟ್ಟ್. ಹಂಗೆ ಅವು ಗೌಡ ಪ್ರೇಮಿ ಮತ್ತೆ ತಾಬೆದಾರ್‍ಕೆ ಕವನ ನಮ್ಮ ಪತ್ರಿಕೇಲಿ ಬರ್‍ತಾ ಇದ್ದ ನಿಮಿತ್ತ ಹಂಗೇನೆ 1960–1970 ರಲ್ಲಿ ಅವ್ ಸಮಾಜಕ್ಕೆ ಸೇವೆ ಸಲ್ಲಿಸಿದ್ದ ಪ್ರಯುಕ್ತ ಅವರ ಪರಿಚಯನ ನಮ್ಮ ಬಳಗ ಓದುಗರ ಮುಂದೆ ಇಡ್ತಾ ಉಟ್ಟ್.

ಮುದ್ದು ಕವಿತ

ನನ್ನೆಸ್ರ್ ಮುದ್ದಪ್ಪ ಆಲಿಯಾಸ್ ಗಣೇಶಾಂತ. ನಂಗೆ ಮದ್ವೆಯಾಗಿ ಮೂರು ಮೂರೂವರೆ ವರ್ಷ ಆತ್. ಆದ್ರೆ ನನ್ನ ಜೀವನಲಿ ನಂದೂತ ಇದ್ರ್ದು ನನ್ನ ಮಗ್ಳು ಕವಿತ ಒಬ್ಳೇ. ಅಪ್ಪ ಅವ್ವ, ಅಣ್ಣ–ತಮ್ಮ, ಅಕ್ಕ–ತಂಗೆತ ನಂಗೆ ಯಾರೂ ಇಲ್ಲೆ. ಆದ್ರೆ ಕವಿತ ನನ್ನೊಟ್ಟಿಗಿದ್ರೆ ನಂಗೆ ಸತ್ತ ಅಪ್ಪವ್ವನಾಗಲೀ, ಒಡಹುಟ್ಟಿದವರನ್ನಾಗ್ಲಿ ಗ್ಯಾನಇದ್ರ್ದುಲೆ. ನನ್ನ ಜೀವಕ್ಕಿಂತ ಹೆಚ್ಚಾಗಿ ನಾ ಅವಳ್ನ ಇಷ್ಟ ಪಡ್ತೋಳೆ.

ಯಾಗೋಳು ಬೆಳಿಗ್ಗೆ 6 ಗಂಟೆಗೆ ಎದ್ದ್ ನನ್ನ ಕೆನ್ನೆ ತಟ್ಟಿ ನನ್ನ ಏಳ್ಸ್‌ತಿದ್ದ ಕವಿತ ಇಂದ್ಯಾಕೋ ಗಂಟೆ ಏಳಾದ್ರು ಏಳದೇ ಇರ್‌ಕನ ನಂಗೆ ತುಂಬಾ ಹೆದ್ರಿಕೆ ಆತ್. ಎದ್ದ್ ಕಟ್ಲ್‌ಲಿ ಕುದ್ದ್‌ಕಂಡ್ ಅವಳ ಮುಖದ ಹತ್ರ ಬಗ್ಗಿದೆ. ಅವಳ ಅಂದ–ಚೆಂದ ನೋಡ್ಕನ ಅವಳಿಗೆ ಮುತ್ತು ಕೊಡುಕುತ ಆಸೆ ಆತ್. ಆದ್ರೂ ಆಸೆನ ತಡ್ಕಂಡ್ ಹಣೆನ ಮುಟ್ಟಿ ನೋಡ್ಕನ ತುಂಬ ಬಿಸಿ ಇತ್ತ್. ಜ್ವರ ಬಂದ್ ಅವ್ಳ ಮೈ ಸುಡ್ತಾ ಇತ್ತ್. ಕಂಬಳಿನ ಅತ್ತ ನೂಕಿದೆ. ಬರೀ ಸಿಮ್ಮಿಸ್‌ಲಿ ಮಲ್ಕಂಡಿತ್ತ್. ಹಾಸಿಗೆಗೆ ಅಡ್ಡ ಹಾಕಂಡಿದ್ದ ಕೈಲೊಮ್ಮೆ ಮೊಖನ ಮರಿಸ್ಕಂಡ್ ತಿರಿಗಿ ಕಂವುಚಿ ಮಲಗಿದ ಗೂಡೆ ಸಣ್ಣಂಗೆ ನ್ರಳ್ತ್.

ನಂಗೆ ತುಂಬಾ ಹೆದ್ರಿಕೆ ಆತ್. ನಿನ್ನೆ ಸ್ವಲ್ಪ ಶೀತ, ಕೆಮ್ಮುತ ಇದ್ದವಳ್ಗೆ ಇಂದ್ ಈ ಪಾಟೆ ಜ್ವರ ಬಂದದೇತ ನಾ ಗ್ಯಾನ ಮಾಡಿತ್ಲೆ. ಬೈಕ್‌ಲೀ ಇವಳ್ನ ಆಸ್ಪತ್ರೆಗೆ ಕರ್ಕೊಂಡೋದು ಕಷ್ಟಾತ ಗ್ಯಾನ ಮಾಡಿ, ಸ್ವಲ್ಪ ದೂರದಲ್ಲಿದ್ದ ರಿಕ್ಷಾದವಂಗೆ ಹೋಗಿ ಬಾಕೆ ಹೇಳಿ ಬಂದೆ.

ನಾ ಬಾಕನ ಕವಿತ ಮೆಲ್ಲೆ ಎದ್ದ್ ಗೋಡೆಗೆ ವರ್ಗಿ ಕುದ್ದಿತ್ತ್. ಅವಳ ಮೊಖ ಬಾಡಿ ಹೋಗಿತ್ತ್. ಮೆಲ್ಲೆ ಅವಳ್ನ ಎತ್ಕಂಡೇ ಹೋಗಿ ರಿಕ್ಷಾಲಿ ಕುದ್‌ರ್ಸಿದೆ. ಅವಳ್ನ ತಬ್ಬಿ ಹಿಡ್ಕಂಡ್ ಅವ್ಳ ಒಟ್ಟಿಗೆ ನಾಕುದ್ದ್‌ಕಂಡೆ. ಮನೆಂದ ಸುಮಾರ್ ಒಂದ್ ಮೈಲಿ ದೂರದ ಪೊನ್ನಪ್ಪ ಡಾಕ್ಟ್ರ ಹತ್ರ ಕರ್ಕೊಂಡೋದೆ. ಅಂವನ ನಂಗೆ ಪರಿಚಯ ಇತ್ತ್. ಅಂವ ಕವಿತನ ಡಾ|| ರಮೇಶ್ ಬೋಪಯ್ಯನತ್ರ ಕರ್ಕೊಂಡೋದು ಒಳ್ಳೇದ್‌ತ ಹೇಳ್ತ್.

ಡಾ|| ರಮೇಶ್ ಬೋಪಯ್ಯ ಕವಿತನ 4 ದಿನ ಅಡ್ಮಿಟ್ ಮಾಡಕುತ ಹೇಳ್ತ್. ನನ್ನ 2 ವರ್ಷದ ಮುದ್ದು ಕವಿತನ ಆಸ್ಪತ್ರೆಲಿ ನಾಕ್ ದಿನ ಹೆಂಗೆ ಬುಡ್ದ್‌ತ ಗೊತ್ತಾಗ್ದೆ ನನ್ನ ಮನಸ್ ಒದ್ದಾಡ್ತ್. ಕಡೆಗೂ ಅವಳ ಒಟ್ಟಿಗೆ ನಾನ್ ಅಲ್ಲೇ ಇದ್ದನೇತ ತೀರ್ಮಾನ ಮಾಡ್ದೆ. ಮೂರ್–ನಾಕ್ ದಿನಲಿ ಕವಿತ ಮೊದ್ಲಿನಂಗೆ ಉಸಾರಾತ್. ಇದರ್ನ ಕಂಡ್ ನಂಗೆ ಕುಸಿಯಾತ್. ಆದ್ರೆ ನಂಗೆ ಮಾತ್ರ ಯಾಕೋ ಆಸ್ಪತ್ರೆ ಬುಟ್ಟ್ ಮನೆಗೆ ಹೋಕೆ ಮನ್ಸೆ ಇತ್ತ್‌ಲೆ ! ●

ನಾಪಂಡ ಗೀತಾಶ್ರೀ, ಮಡಿಕೇರಿ

[17 ನೇ ಪುಟದಿಂದ]

ಗುಂಡ್ ಹೊಡ್ದಿರುವೊ. ಆದರ ಬಾಯಿಗೆ ಮಣ್ಣ್ ಹಾಕಲಿ ತೇಳಿ ಒಲೆ ಬುಡಲಿ ಇನ್ನೊಂದು ಗ್ಲಾಸ್ ಕರೀ ಕಾಫಿ ಕೇಳಿ ಕುಡ್ದ್ ಕುದ್ದತ್. ಹೆಣ್ಣ್ ಪುನಃ ಹೋಗಿ "ಕುಟ್ಟಿ ಬಾ ಬಾ..." ತ ಕರ್ದರೂ ಹಂದಿ ಬಾತ್ಲೆ. ಆಮೇಲೆ ಕಂಬು ಹುಡ್ಕೆಂಡ್ ಹೋಕಾಕನ ಮುತ್ತಣ್ಣನ ಗದ್ದೆಲಿ ಹೊಡ್ಡ್ ಹಾಕೊಳೊ. ಆದರ್ನ ನೋಡಿ ಅಲ್ಲಿಂದ್ಲೆ ಹೆಣ್ಣಿಗೂ, ಹಂದಿಗೂ ಬಾಯಿಗೆ ಬಂದಂಗೆ ಬೈಕಂಡ್, ಹಂದಿನ ಕಾಲ್ ಹಿಡ್ದ್ ಎಳ್ಕಂಡ್ ಬಾತ್. ಹೆಣ್ಣ್, ಹಂದಿನ ನೋಡಿ ಮಗಳ ಮದ್ವೆಗೆತ ಬುಟ್ಟ ಹಂದಿ ಹಿಂಗಾತಲೆತ ಗ್ಯಾನ ಮಾಡ್ಕಿಂಡೆ ಕುದ್ದವಳು ಮೇಲೆ ಎದ್ದತ್‌ಲೆ ನಿವಾರ್ ಹೋಗಿ ಏಳ್ಸಿ.

ಇಲ್ಲಿ ಸೂಚಿಸಿದ ಹೆಸರ್‌ಗೆಲ್ಲ ಕೇವಲ ಕಾಲ್ಪನಿಕ ●

ಓದುಗರಲ್ಲಿ ವಿನಂತಿ

ನಾವು ಇದುವರೆಗೂ ನಿಮಗಳಿಗೆ, ನಿಮ್ಮಿಂದ ಬೇಡಿಕೆ ಇಲ್ಲದಿದ್ದರೂ ಸಹ ಪತ್ರಿಕೆಯನ್ನು ಕಳುಹಿಸುತ್ತಿದ್ದೆವು. ಕಾರಣ ನಿಮ್ಮ ಸಂಬಂಧಿಕರು, ಹಾಗೂ ಪರಿಚಯಸ್ತರು ವಿಳಾಸ ಕೊಟ್ಟ ಮೇರೆಗೆ ಪತ್ರಿಕೆ ಕಳುಹಿಸಲು ಸಾಧ್ಯವಾಯಿತು. ಆದರೆ ಹಲವರು ಈಗಾಗಲೇ ಚಂದದಾರರಾಗಿದ್ದಾರೆ. ಉಳಿದವರು ತಾವ್ಯೆ ಆದಷ್ಟು ಬೇಗ M.O. ಮೂಲಕ ಕಳುಹಿಸಿ ಸಹಕರಿಸಬೇಕೆಂದು ಕೋರಿಕೆ.

—ಸಂ.

K.R.N.N. 240

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12 Published at Mysore, Editor PATTADA P. SHEELAMANI, 322, Hinkal Village & Post, (Near Aralikatte) Mysore-570 017 Phone : 516771